# MEMORANDUM OF ASSOCIATION AND RULES OF The Hebbar Sreevaishnava Sabha (R)

Registered in No.AMR/114/86-87/3-1987

Amended Rules/Bye-laws as approved by the Registrar of Societies in Bangalore

1. AMR/182/98-99 / dated 09-07-1999
2. AMR/11/12-13 / dated 27-11-2012
3. AMR/05/20-21 / dated 16-06-2020
4. AMR/60/23-24 / dated 22-12-2023

**The Hebbar Sreevaishnava Sabha (R)**

22, Seshadri Road, BANGALORE - 560009

Phone No. 080 - 48528222 / 8217544776

# ಶ್ರೀ ಶ್ರೀ ಶ್ರೀ ರಾಮಾನುಜಾಚಾರ್ಯರು





**ಶ್ರೀ ವಿ.ಎನ್. ನರಸಿಂಹ ಐಯ್ಯಂಗಾರ್**

ಸಂಸ್ಥಾಪಕರು ದಿ ಹೆಬ್ಬಾರ್ ಶ್ರೀವೈಷ್ಣವ ಸಭಾ (ರಿ) 1918

# MEMORANDUM OF ASSOCIATION AND RULES OF

## The Hebbar Sreevaishnava Sabha (R)

Registered in No.AMR/114/86-87/3-1987

Amended Rules/Bye-laws as approved by the Registrar of Societies in Bangalore

1. AMR/182/98-99 / dated 09-07-1999
2. AMR/11/12-13 / dated 27-11-2012
3. AMR/05/20-21 / dated 16-06-2020
4. AMR/60/23-24 / dated 22-12-2023

**The Hebbar Sreevaishnava Sabha (R)**
22, Seshadri Road, BANGALORE - 560009
Phone No. 080 - 48528222 / 8217544776

# ದಿ ಹೆಬ್ಬಾರ್ ಶ್ರೀವೈಷ್ಣವ ಸಭಾ (ರಿ)

**ನಂ.22, ಶೇಷಾದ್ರಿ ರಸ್ತೆ, ಬೆಂಗಳೂರು–560009**

**ನೋಂದಣಿ ಸಂಖ್ಯೆ–547 । ದಿನಾಂಕ : 07.11.1918**

## ತಿದ್ದುಪಡಿಯಾಗಿರುವ ಉಪನಿಯಮಗಳು

## ಪ್ರಸ್ತಾವನೆ

ದಿ ಹೆಬ್ಬಾರ್ ಶ್ರೀವೈಷ್ಣವ ಸಭಾದ ಕೇಂದ್ರ ಸಮಿತಿಯು ಸಭಾದ ಉಪನಿಯಮಗಳನ್ನು ರಚಿಸಿ 1987 ರಲ್ಲಿ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆಯಲಾಯಿತು. 1999ರಲ್ಲಿ ಈ ನಿಯಮಗಳಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಿ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆಯಲಾಯಿತು. ನಂತರ ಇದರಲ್ಲಿ ಬಿಟ್ಟು ಹೋಗಿದ್ದ ಕೆಲವೊಂದು ನಿಯಮಗಳನ್ನು ಸೇರಿಸಿ ಉಪಕಾರಕ ನಿಯಮಗಳನ್ನು ರಚಿಸಲಾಯಿತು. 2012 ರಲ್ಲಿ ಉಪನಿಯಮಗಳಲ್ಲಿ ಮತ್ತು ಉಪಕಾರಕ ನಿಯಮಗಳಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಿ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದು ನೋಂದಣಾಧಿಕಾರಿಗಳಿಂದ ಅನುಮತಿ ಪಡೆಯಲಾಯಿತು. ನಂತರ 2017ರಲ್ಲಿ ಕೆಲವೊಂದು ತಿದ್ದುಪಡಿಗಳನ್ನು ಮಾಡಿ ಅನುಮೋದನೆ ಪಡೆಯಲಾಯಿತು.

ಸದಸ್ಯರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಕೆಲವೊಂದು ಗೊಂದಲಗಳನ್ನು ನಿವಾರಿಸುವ ಸಲುವಾಗಿ ಉಪನಿಯಮಗಳಲ್ಲಿ ತಿದ್ದುಪಡಿ ಮಾಡಿ ಉಪಕಾರಕ ನಿಯಮಗಳನ್ನು ಸಹ ಉಪನಿಯಮಗಳಲ್ಲಿ ಸೇರಿಸಿ ನೂತನ ಉಪನಿಯಮಗಳನ್ನು ರಚಿಸಲಾಗಿದೆ. ಇದನ್ನು 2023ರಲ್ಲಿ ನಡೆದಿರುವ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಇನ್ನು ಮುಂದೆ ಸಭಾದಲ್ಲಿ ಯಾವುದೇ ಉಪಕಾರಕ ನಿಯಮಗಳು ಇರುವುದಿಲ್ಲ. ಕೇವಲ ಉಪನಿಯಮಗಳು ಮಾತ್ರ ಜಾರಿಯಲ್ಲಿರುತ್ತದೆ.

**ಪ್ರತಿಜ್ಞಾ ವಿಧಿ :–** ಎಲ್ಲಾ ನೂತನ ಕೇಂದ್ರ ಸಮಿತಿ ಸದಸ್ಯರು, ಮೊದಲ ಸಭೆಯಲ್ಲಿ ಸಭಾದ ಗೌಪ್ಯತೆಯನ್ನು ಕಾಪಾಡುವುದಾಗಿ ದೇವರ/ಆಚಾರ್ಯರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಬೇಕಾಗುತ್ತದೆ.

**ಸಭಾದ ಧ್ಯೇಯೋದ್ದೇಶಗಳು :–**

ಎ). ಶಿಕ್ಷಣ, ಸಂಸ್ಕೃತಿ ಮತ್ತು ಉತ್ತಮ ಪೌರತ್ವದ ಅಭಿವೃದ್ಧಿ.

ಬಿ). ಮೇಲೆ (ಎ) ನಲ್ಲಿ ನಿರೂಪಿಸಿರುವ ಗುರಿಗಳನ್ನು ಉತ್ತೇಜಿಸುವ ಇತರೆ ಉದ್ದೇಶಗಳು.

ಸಿ). ಸೂಕ್ತವಾದ ಕ್ಷೇತ್ರಗಳಲ್ಲಿ ವಿಭಾಗಗಳ ಅಥವಾ ಉಪಸಭಾಗಳನ್ನು ಸ್ಥಾಪಿಸುವ ಮೂಲಕ ಧ್ಯೇಯೋದ್ದೇಶಗಳನ್ನು ಪರಿಣಾಮಕಾರಿಯಾಗಿ ಸಾಧಿಸುವುದು. ಸೂಕ್ತ ಪ್ರದೇಶಗಳನ್ನು ಮೂಲ ಸಭಾಗೆ ಸೇರಿಸುವುದು.

ಡಿ). ಮೇಲಿನ (ಎ) ನಲ್ಲಿ ನಿರೂಪಿಸಿರುವ ಉದ್ದೇಶ ಸಾಧನೆಗೆ ಸಭಾ ರಚಿಸಿರುವ ನ್ಯಾಸಗಳನ್ನು ಸ್ಥಾಪಿಸಿ ಆಡಳಿತ ನಡೆಸುವುದು.

ಇ). ಸಭಾದ ಅಧಿಕಾರ ವ್ಯಾಪ್ತಿ ಅನ್ವಯಕ್ಕೆ ವಿರುದ್ಧವಾಗದಂತೆ ಮೇಲಿನ ಧ್ಯೇಯೋದ್ದೇಶಗಳನ್ನು ಸಾಧಿಸಲು ಅಗತ್ಯವಾದ ಎಲ್ಲಾ ಕೆಳಕಂಡ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದು.

**ಈ ಕೆಳಗಿನ ವಿಷಯಗಳ ಬಗ್ಗೆ ಸಭಾ ಗಮನಹರಿಸುವುದು:–**

ಸಾಕಷ್ಟು ಹಣವನ್ನು ಸಂಗ್ರಹಿಸುವುದು ಮತ್ತು ಅದರಿಂದ ಗಳಿಸುವ ಆದಾಯ ಮತ್ತು ಇತರ ನಿಧಿಗಳಿಂದ ಉದ್ಭವವಾಗುವ ಆದಾಯವನ್ನು ವಿದ್ಯಾರ್ಥಿವೇತನಗಳನ್ನು ನೀಡಲು ಹಾಗೂ ಶಾಲೆಗಳು ಮತ್ತು ಇತರೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಬಳಸಬೇಕು.

(ಎಫ್). ಅರ್ಥಶಾಸ್ತ್ರ, ಶಿಕ್ಷಣ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ಸಭಾದ ಸದಸ್ಯರ ಜ್ಞಾನವು ವೃದ್ಧಿಯಾಗುವಂತೆ ಮತ್ತು ಅವರ ಕಲ್ಯಾಣಕ್ಕಾಗಿ ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು.

(ಜಿ). ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನೊಳಗೊಂಡ ಉಪಯುಕ್ತ ಸಾಹಿತ್ಯವನ್ನು ಪ್ರಕಟಿಸುವುದು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದು.

(ಹೆಚ್). ಹೆಬ್ಬಾರ್ ಐಯ್ಯಂಗಾರ್ ಸಮುದಾಯದ ಯಾವುದೇ ಕುಟುಂಬದ ಯೋಗ್ಯ ವಿದ್ಯಾರ್ಥಿಗಳಿಗೆ ವಿಧ್ಯಾರ್ಥಿವೇತನ ಮತ್ತಿತರ ನೆರವು ನೀಡುವುದಲ್ಲದೆ ಸದಸ್ಯರಿಗೆ ಸಹಾಯಮಾಡುವುದು.

(ಐ). ಹೆಬ್ಬಾರ್ ಐಯ್ಯಂಗಾರ್ ಸಮುದಾಯದ ಹಿರಿಯನಾಗರೀಕರಿಗೆ ವೃದ್ಧಾಶ್ರಮಗಳನ್ನು ಸ್ಥಾಪಿಸುವುದು.

(ಜೆ). ಶ್ರೀ ರಾಮಾನುಜರ ತತ್ವಗಳನ್ನು ಎಲ್ಲೆಡೆ ಹರಡುವುದು, ವಾದ್ಯಾರುಗಳಿಗೆ ತರಬೇತಿ ನೀಡುವುದನ್ನು ಒಳಗೊಂಡಂತೆ ವೇದ ಮತ್ತು ದಿವ್ಯ ಪ್ರಬಂಧ ಪಾಠಶಾಲೆಗಳನ್ನು ಸ್ಥಾಪಿಸುವುದು.

(ಕೆ). ಸದಸ್ಯರ ಮರಣದ ನಂತರ ಅವರ ವಾರಸುದಾರರಿಗೆ ಮರಣ ಪರಿಹಾರ ನಿಧಿಯನ್ನು ಕೊಡುವುದು. ಈ ಮೊತ್ತವನ್ನು ಕಾಲಕಾಲಕ್ಕೆ ಕೇಂದ್ರ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗುವುದು.

**1. ನೋಂದಾಯಿಸಿದ ಕಛೇರಿ:–**

ಅ) **ಸಂಸ್ಥೆಯ ಹೆಸರು :–** ದಿ ಹೆಬ್ಬಾರ್ ಶ್ರೀವೈಷ್ಣವ ಸಭಾ (ಟಿ.ಹೆಚ್.ಎಸ್.ಎಸ್.)

ಆ) **ವಿಳಾಸ ಮತ್ತು ನೋಂದಾಯಿತ ಕಛೇರಿ**
ನಂ.22, ಶೇಷಾದ್ರಿ ರಸ್ತೆ, ಬೆಂಗಳೂರು – 560009.
ದೂರವಾಣಿ: 080–48528222, 8217544776

**2. ಆಡಳಿತ ವ್ಯಾಪ್ತಿ :–**

ಸಭಾದ ಆಡಳಿತವು ಎಲ್ಲಾ ಹೆಬ್ಬಾರ್ ಶ್ರೀವೈಷ್ಣವ ಸಭಾದ ಸದಸ್ಯರು ಹಾಗೂ ಅವರು ವಾಸಿಸುವ ಭಾರತದ ಎಲ್ಲಾ ಸ್ಥಳಗಳ ಮೇಲೂ ವ್ಯಾಪಿಸುತ್ತದೆ.

**ಅರ್ಥ ವಿವರಣೆ:–** ಈ ನಿಯಮ ಮತ್ತು ನಿಬಂಧನೆಗಳಲ್ಲಿ ಏನಾದರು ಉದ್ದೇಶಕ್ಕೆ ಅಥವಾ ಸಂದರ್ಭಕ್ಕೆ ಉಚಿತವಲ್ಲದನ್ನು ಹೊರತುಪಡಿಸಿ ಈ ವ್ಯಾಖ್ಯಾನಗಳು ಅನ್ವಯಗೊಳ್ಳುತ್ತದೆ.

(ಅ) "ಸಭಾ" ಎಂದರೆ ದಿ ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು

(ಆ) "ಸದಸ್ಯ" ಎಂದರೆ ಹೆಬ್ಬಾರ್ ಶ್ರೀವೈಷ್ಣವ ಐಯ್ಯಂಗಾರ್ ವ್ಯಾಪ್ತಿಗೆ ಚಂದಾ ಹಣ ಕೊಟ್ಟು ಆಜೀವ ಸದಸ್ಯರಾಗಿ ಸೇರ್ಪಡೆಯಾದವರು.

(ಇ) (ಸಿ.ಸಿ) (Central Committee) "ಕೇ.ಸ" ಎಂದರೆ ಉಪಸಭಾಗಳಿಂದ ಚುನಾಯಿತರಾದ ಸದಸ್ಯರ ಕೇಂದ್ರ ಸಮಿತಿ.

(ಈ) (ಒ.ಬಿ) (Office Bearer) "ಆ.ಮ" ಎಂದರೆ ಆಡಳಿತ ಮಂಡಳಿ

(ಉ) (ಇ.ಸಿ) (Executive Committee) "ಕಾ.ಸ" ಎಂದರೆ ಉಪಸಭಾಗಳ ಕಾರ್ಯಕಾರಿ ಸಮಿತಿ

**3. ವಿವರಣೆ :–**

ಹೆಬ್ಬಾರ್ ಶ್ರೀವೈಷ್ಣವ ಐಯ್ಯಂಗಾರ್‌ನಲ್ಲಿ ಕೆಳಕಂಡವರೂ ಸೇರುತ್ತಾರೆ.

(ಎ) ಹುಟ್ಟಿನಿಂದ ಹೆಬ್ಬಾರ್ ಶ್ರೀವೈಷ್ಣವ ಐಯ್ಯಂಗಾರ್‌ಗಳು

(ಬಿ) ಕಾನೂನು ರೀತ್ಯ ಮದುವೆಯಾದ ದಂಪತಿಗಳಲ್ಲಿ ಗಂಡ ಹೆಬ್ಬಾರ್ ಐಯ್ಯಂಗಾರ್ ಆಗಿದ್ದು ಹೆಂಡತಿ ಬೇರೆ ಪಂಗಡದ ಐಯ್ಯಂಗಾರ್ ಆಗಿದ್ದರೂ ಸಹ ಅವರ ಮಕ್ಕಳಿಗೆ ಸದಸ್ಯತ್ವವನ್ನು ಕೊಡಬಹುದು ಹಾಗೂ ಹೆಂಡತಿಗೂ ಸದಸ್ಯತ್ವವನ್ನು ಕೊಡಬಹುದು. ಹೆಬ್ಬಾರ್ ಸಭಾ ಸದಸ್ಯತ್ವವನ್ನು ಪಡೆದ ಮೇಲೆ ಹೆಣ್ಣಾಗಲಿ/ಗಂಡಾಗಲಿ ಬೇರೆ ಯಾವ ಐಯ್ಯಂಗಾರ್ ಸಂಘ ಸಂಸ್ಥೆಯಲ್ಲಿಯೂ ಸದಸ್ಯತ್ವ ಇರಬಾರದು.

**4. ಅಧಿಕೃತ ವರ್ಷ :–**

ಸಭಾದ ಅಧಿಕೃತ ವರ್ಷವು ಏಪ್ರಿಲ್ 1 ರಿಂದ ಮುಂದಿನ ವರ್ಷ ಮಾರ್ಚ 31 ರವರೆಗೆ ಇರುತ್ತದೆ.

**5. ಸದಸ್ಯತ್ವ :–**

(ಎ). ಹೊಸ ಸದಸ್ಯರ ಸದಸ್ಯತ್ವವು, ಉಪಸಭಾಗಳ ಮೂಲಕ ಬಂದು ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆಯಾಗ ಬೇಕಾಗುತ್ತದೆ. ಸದಸ್ಯತ್ವದ ಅರ್ಜಿಯಲ್ಲಿ ಉಪಸಭಾದ ಪದಾಧಿಕಾರಿಗಳು ಮತ್ತು ಕೇಂದ್ರ ಸಮಿತಿ ಸದಸ್ಯರು ಹಾಗೂ ಬಹುಮತದ ಕಾರ್ಯಕಾರಿ ಸಮಿತಿ ಸದಸ್ಯರು ಸಹಿ ಮಾಡಿರಬೇಕು.

(ಬಿ). ಸಭಾದ ಸದಸ್ಯತ್ವವು ಹೆಬ್ಬಾರ್ ಶ್ರೀವೈಷ್ಣವ ಐಯ್ಯಂಗಾರ್ ಸಮುದಾಯದ ವ್ಯಕ್ತಿಗಳಿಗೆ ಮಾತ್ರ ಮೀಸಲಿರುತ್ತದೆ.

(ಸಿ) ಸಭಾದ ಆಜೀವ ಸದಸ್ಯರಾಗಲು ಇಚ್ಛಿಸುವ ಪ್ರತಿಯೊಬ್ಬ ಹೆಬ್ಬಾರ್ ಐಯ್ಯಂಗಾರ್ ವ್ಯಕ್ತಿಯು ಕಾಲಕಾಲಕ್ಕೆ ಕೇಂದ್ರ (ಸೆಂಟ್ರಲ್) ಸಮಿತಿಯಲ್ಲಿ ನಿರ್ಧರಿಸಿದಂತೆ ಪ್ರವೇಶ ಶುಲ್ಕವನ್ನು ನೀಡಬೇಕು, ಅಲ್ಲದೆ ಕಾಲಕಾಲಕ್ಕೆ ಸಮಿತಿಯು ನಿಗದಿಪಡಿಸುವ ಒಂದು ಬಾರಿ ಕೊಡುವಂತೆ ಆಜೀವ ಸದಸ್ಯರ ಶುಲ್ಕವನ್ನು ಸಹ ನೀಡಬೇಕು.

(ಡಿ) ಹೊರರಾಜ್ಯಗಳಲ್ಲಿ ಹಾಗೂ ಉಪಸಭಾದ ವ್ಯಾಪ್ತಿಗೆ ಬಾರದ ಪ್ರದೇಶ/ಜಿಲ್ಲೆಯಲ್ಲಿರುವವರಿಗೆ ಸದಸ್ಯತ್ವವನ್ನು ಕೊಟ್ಟು ಇವರನ್ನು ಸೆಂಟ್ರಲ್ ಉಪಸಭಾದಲ್ಲಿ ಇರಿಸಬೇಕು. ಇವರು ಸಭಾದಿಂದ ಕಲ್ಯಾಣ ಮಂಟಪದ ರಿಯಾಯಿತಿ, ವಿದ್ಯಾರ್ಥಿ ವೇತನ ಮತ್ತು ಮರಣ ಪರಿಹಾರ ನಿಧಿಯನ್ನು ಪಡೆಯಲು ಮಾತ್ರ ಅರ್ಹರಾಗಿರುತ್ತಾರೆ. ಇವರು ಯಾವುದೇ ಚುನಾವಣಾ ಪ್ರಕ್ರಿಯೆಯಲ್ಲಿ ಮತ್ತು ಸರ್ವ ಸದಸ್ಯರ ಸಭೆಗೆ ಭಾಗವಹಿಸುವಂತಿಲ್ಲ.

(ಇ) ಕಲ್ಯಾಣ ಮಂಟಪಕ್ಕೆ ರಿಯಾಯಿತಿ, ಮರಣ ಪರಿಹಾರ ಭತ್ಯೆ, ವಿದ್ಯಾರ್ಥಿವೇತನ ಮುಂತಾದ ಸೌಲಭ್ಯಗಳನ್ನು ಪಡೆಯಲು ಸದಸ್ಯರು, ಸದಸ್ಯತ್ವವನ್ನು ಪಡೆದು ಸಭಾದ ಗುರುತಿನ ಚೀಟಿಯನ್ನು ಹೊಂದಿರಬೇಕು.

(ಎಫ್) ಕೇಂದ್ರ ಸಭಾದ ಆಡಳಿತ ಮಂಡಳಿ ಪದಾಧಿಕಾರಿಗಳು ಎಂದರೆ, ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಖಜಾಂಚಿಗಳಾಗಿರುತ್ತಾರೆ. (ಸಾಮಾನ್ಯವಾಗಿ ಪದಾಧಿಕಾರಿಗಳ ಸಭೆ ಪ್ರತಿ ತಿಂಗಳ ಮೊದಲನೆ ಶನಿವಾರದಂದು ನಡೆಯುತ್ತದೆ.) ಉಪಸಭಾಗಳು ತಮ್ಮ ವ್ಯಾಪ್ತಿಯಲ್ಲಿ ವಾಸವಿರುವಂತಹ ಸದಸ್ಯರುಗಳ ಆಜೀವ ಸದಸ್ಯತ್ವದ ಅರ್ಜಿಗಳನ್ನು ಮಾತ್ರ ಶಿಫಾರಸ್ಸು ಮಾಡಬಹುದು. ಸದಸ್ಯತ್ವದ ಅನುಮೋದನೆಯ ನಂತರ ವಿವರಗಳನ್ನು ಆಯಾ ವ್ಯಾಪ್ತಿಗೆ ಸಂಬಂಧಿಸಿದ ಉಪಸಭಾಗಳಿಗೆ ಅವರ ಮಾಹಿತಿಗಳನ್ನು ಕಳುಹಿಸಲಾಗುತ್ತದೆ. ಸದಸ್ಯತ್ವ ಶುಲ್ಕಗಳನ್ನು ಪಡೆಯಲು ಎಲ್ಲಾ ಅರ್ಜಿದಾರರಿಗೆ ಉಪಸಭಾಗಳು

ತಾತ್ಕಾಲಿಕ ರಶೀದಿಯನ್ನು ನೀಡಬಹುದು ನಂತರ ಪದಾಧಿಕಾರಿಗಳ ಸಭೆಯಲ್ಲಿ ಅನುಮೋದಿತವಾದ ಹೊಸ ಸದಸ್ಯತ್ವದ ಶುಲ್ಕದ ರಶೀದಿಯನ್ನು ಕೇಂದ್ರ ಸಭಾವು ನೀಡುತ್ತದೆ ಮತ್ತು ಕೇಂದ್ರ ಸಭಾದಲ್ಲಿ ಪೂರ್ತಿ ಸದಸ್ಯತ್ವದ ಶುಲ್ಕವನ್ನು ಕೋರ್ ನಿಧಿಯಾಗಿ ಇಡಲಾಗುತ್ತದೆ.

**6. ಸದಸ್ಯತ್ವದ ವಿಧಗಳು :–**

(ಅ) **ಆಜೀವ ಸದಸ್ಯರು :–** ಕೇಂದ್ರ ಸಮಿತಿಯು ಕಾಲಕಾಲಕ್ಕೆ ನಿಗದಿಪಡಿಸುವ ಆಜೀವ ಸದಸ್ಯತ್ವದ ಶುಲ್ಕ ಎಂದು ನಿಶ್ಚಯಿಸುವ ಮೊತ್ತವನ್ನು ಸದಸ್ಯತ್ವದ ಶುಲ್ಕ ಎಂದು ಒಂದು ಬಾರಿಗೆ ನೀಡುವ ವ್ಯಕ್ತಿ, ಕೇಂದ್ರ ಸಮಿತಿ ನಿಶ್ಚಯಿಸುವಂತೆ ಹೊಸ ಸದಸ್ಯರಿಗೆ ಬದಲಾದ ಶುಲ್ಕಗಳು ಅನ್ವಯಿಸುವುದು. ಈ ಶುಲ್ಕವು ಕೇಂದ್ರ ಸಮಿತಿಯಿಂದ ಅನುಮೋದನೆಯಾದ ನಂತರ ಜಾರಿಗೆ ಬರುತ್ತದೆ.

(ಆ) ಸದಸ್ಯತ್ವವನ್ನು ಪಡೆಯಲು ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳಿಂದ ಗರಿಷ್ಠ 70 ವರ್ಷಗಳ ಒಳಗೆ ಇರಬೇಕು.

(ಇ) ಒಮ್ಮೆ ನೀಡಿದ ಸದಸ್ಯತ್ವದ ಹಣವನ್ನು ಹಿಂದಿರುಗಿಸ–ಲಾಗುವುದಿಲ್ಲ ಹಾಗೂ ಆ ಹಣವನ್ನು ನಿಧಿ, ವಿದ್ಯಾರ್ಥಿವೇತನ ಅಥವಾ ಇತರ ದತ್ತಿನಿಧಿಗಳಿಗೆ ವರ್ಗಾಯಿಸುವಂತಿಲ್ಲ.

7. **ಸದಸ್ಯತ್ವಕ್ಕೆ ಅರ್ಹತೆ:–** ಮೇಲಿನ 3ಎ ಮತ್ತು 3ಬಿಯಲ್ಲಿ ಪ್ರಸ್ತಾಪಿಸಿರುವ ನಿಬಂಧನೆಗಳಿಗೆ ಬದ್ಧರಾದವರು.

**8. ಸದಸ್ಯರ ಹಕ್ಕುಗಳು:–**

(ಎ) ಸರ್ವ ಸದಸ್ಯರ ಸಭೆ ಅಥವಾ ವಿಶೇಷ ಸರ್ವ ಸದಸ್ಯರ ಸಭೆಗೆ 21 ದಿನಗಳಿಗೆ ಮುಂಚಿತವಾಗಿ ಕಳುಹಿಸಿರುವ ಪ್ರಸ್ತಾವನೆಯನ್ನು ಮಂಡಿಸುವ ಹಕ್ಕು.

(ಬಿ) ಸರ್ವ ಸದಸ್ಯರ ಸಭೆ ಅಥವಾ ವಿಶೇಷ ಸರ್ವ ಸದಸ್ಯರ ಸಭೆಗೆ 10 ದಿನಗಳಿಗೆ ಮುಂಚಿತವಾಗಿ ಕಳುಹಿಸಿರುವ ಪ್ರಕಟಿತ ವಿಷಯಗಳಿಗೆ ನಡುವೆ ಬೇರೆ ವಿಷಯಗಳನ್ನು ಸೇರಿಸುವ ಹಕ್ಕು.

(ಸಿ) ಸಭಾ ನೀಡುವ ಅನುಕೂಲತೆಗಳನ್ನು ತೆಗೆದುಕೊಳ್ಳಲು ಅಭ್ಯರ್ಥಿಗಳನ್ನು ಪ್ರಮಾಣಿಕರಿಸುವ ಹಕ್ಕು.

(ಡಿ) ಹೆಬ್ಬಾರ್ ಶ್ರೀವೈಷ್ಣವ ಐಯ್ಯಂಗಾರ್ ಸದಸ್ಯರುಗಳಿಗೆ ಸೆಂಟ್ರಲ್ ಉಪಸಭಾ ಸದಸ್ಯರನ್ನು ಹೊರತುಪಡಿಸಿ ಈ ಕೆಳಗಿನ ಸದಸ್ಯರನ್ನು ಚುನಾಯಿಸುವ ಚುನಾವಣೆಗಳಲ್ಲಿ ಭಾಗವಹಿಸುವ ಹಕ್ಕು ಇರುತ್ತದೆ.

1. ಆಯಾ ಉಪಸಭಾಗಳ "ಕಾರ್ಯಕಾರಿ ಸಮಿತಿ" ಯ ಸದಸ್ಯರು.
2. ಕೇಂದ್ರ ಸಮಿತಿಯಲ್ಲಿ ಉಪಸಭಾವನ್ನು ಪ್ರತಿನಿಧಿಸುವ ಇಬ್ಬರು ಸದಸ್ಯರು.

(ಇ) ಎಲ್ಲಾ ಕಾನೂನು ಬದ್ಧ ಮತ್ತು ಸಮರ್ಥನೀಯ ರೀತಿಯಲ್ಲಿ ಸಭಾದ ಧ್ಯೇಯೋದ್ದೇಶಗಳನ್ನು ಪ್ರತಿ ಸದಸ್ಯರು ಕೂಡ ಪ್ರೋತ್ಸಾಹಿಸತಕ್ಕದ್ದು ಮತ್ತು ತಮ್ಮ ಬಂಧು ಮಿತ್ರರ ಮನೆಗಳಲ್ಲಿ ನಡೆಯುವ ಎಲ್ಲಾ ಪ್ರಮುಖ ಕಾರ್ಯಕ್ರಮಗಳಲ್ಲಿ ದಕ್ಷಿಣೆ ಅಥವಾ ಸಂಭಾವನೆಗಳನ್ನು ಕೊಡುವಂತಹ ವಿವಿಧ ರೀತಿಗಳಲ್ಲಿ ಕೇಂದ್ರ ಸಭಾದ ನಿಧಿ ಸಂಗ್ರಹಣೆಗೆ ಸಹಾಯ ಮಾಡತಕ್ಕದ್ದು.

(ಎಫ್) ಸಮುದಾಯದ ಒಳಿತಿಗಾಗಿ ಸದಸ್ಯರು ತಮ್ಮ ಹಕ್ಕುಗಳನ್ನು ಚಲಾಯಿಸಬೇಕು. ಸಭಾದ ವಿರುದ್ಧ ಯಾವುದೇ ಸದಸ್ಯರಾಗಲಿ ದೂರು ಹೇಳುವುದಿದ್ದಲ್ಲಿ ಅವರು ಅದನ್ನು ಕೇಂದ್ರ ಸಮಿತಿಗೆ ತಿಳಿಸಬೇಕು ಹಾಗೂ ಕೇಂದ್ರ ಸಮಿತಿ ನಿರ್ಧಾರಕ್ಕೆ ಆ ಸದಸ್ಯರು ಬದ್ಧರಾಗಿರಬೇಕು ಮತ್ತು ನೇರವಾಗಿ ನ್ಯಾಯಾಲಯಕ್ಕೆ ಹೋಗುವಂತಿಲ್ಲ.

**9. ಸದಸ್ಯತ್ವದ ವರ್ಗೀಕರಣ :–**

ಯಾವುದೇ ಸದಸ್ಯರಿಗೆ ಚಿತ್ತ ಭ್ರಮಣೆಯಾದಲ್ಲಿ ಅಥವಾ ನೈತಿಕತೆಗೆ ವಿರುದ್ಧವಾದಂತಹ ಅಪರಾಧವನ್ನು ಎಸಗಿದ್ದಕ್ಕಾಗಿ ದಂಡನೆಯಾದಲ್ಲಿ ಅಂತಹ ಸದಸ್ಯರು ತಮ್ಮ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ.

**10. ಸದಸ್ಯತ್ವದ ಅಮಾನತ್ತು / ವಜಾ ಮಾಡುವಿಕೆ**

1. ಕಾನೂನು ವಿಚಾರಣೆ ನಂತರ ಉದ್ದೇಶಿಸಿದ ಸದಸ್ಯರುಗಳಿಗೆ ಸಮರ್ಥಿಸಿಕೊಳ್ಳುವ ಅವಕಾಶ, ಸ್ವಾಭಾವಿಕ ನ್ಯಾಯದ ತತ್ವಗಳು ಇತ್ಯಾದಿಗಳನ್ನು ಪಾಲಿಸಿದ ನಂತರ ಸರಿಯಾದ ಸಾಕ್ಷಿ ಪುರಾವೆಗಳನ್ನು ನೀಡದ ದೂರುಗಳು ಸಾಬೀತಾದಲ್ಲಿ ಕೇಂದ್ರ ಸಮಿತಿಯು ಆ ಸದಸ್ಯರನ್ನು 3 ವರ್ಷಗಳಿಗೆ ಮೀರದ ನಿಗದಿತ ಅವಧಿಯವರೆಗೆ ಅಮಾನತ್ತಿನಲ್ಲಿ ಇಡುವ ಅಧಿಕಾರವನ್ನು ಹೊಂದಿರುತ್ತದೆ. ಅಮಾನತ್ತಿನಲ್ಲಿ ಇರುವ ಅವಧಿಯಲ್ಲಿ ಯಾವುದೇ ಸವಲತ್ತುಗಳು ಸಿಗುವುದಿಲ್ಲ.
2. ಕೇಂದ್ರ ಸಮಿತಿಯ ಶಿಫಾರಸ್ಸಿನ ನಂತರ ಮಾತ್ರ ಸರ್ವ ಸದಸ್ಯರ ಸಭೆಯು, ಸಭೆಯಲ್ಲಿ ಉಪಸ್ಥಿತರಿರುವ 3/4 ಸಂಖ್ಯೆಯ ಸದಸ್ಯರ ಬಹುಮತ ಪಡೆದು, ಅಂತಹ ಸದಸ್ಯರನ್ನು ಸಭಾದ ಸದಸ್ಯತ್ವದಿಂದ ತೆಗೆದು ಹಾಕಬಹುದು. ಆದರೆ ಇಲ್ಲಿ ಸ್ವಯಂಪ್ರೇರಿತ ತೀರ್ಮಾನಗಳನ್ನು ತೆಗೆದುಹಾಕಲಾಗಿದೆ.
3. ದೂರುದಾರರು ದೂರಿಗೆ ಸಂಬಂಧಪಟ್ಟಂತೆ ಸರಿಯಾದ ಸಾಕ್ಷಿಗಳನ್ನು ಕೊಡದೆ ದೂರು ಸಾಬೀತಾಗದೆ ಇದ್ದಲ್ಲಿ ದೂರು ಕೊಟ್ಟಿರುವ ಸದಸ್ಯರ ಸದಸ್ಯತ್ವವನ್ನು ಅಮಾನತ್ತಿನಲ್ಲಿ ಇಡುವ ಅಧಿಕಾರ ಕೇಂದ್ರ ಸಮಿತಿಗೆ ಇರುತ್ತದೆ. ಹಾಗೂ ಈ ವಿಚಾರಣೆಗೆ ತಗುಲಿರುವ ಖರ್ಚುವೆಚ್ಚಗಳನ್ನು ದೂರುದಾರರಿಂದ ವಸೂಲಿ ಮಾಡಬಹುದಾಗಿರುತ್ತದೆ. (ನ್ಯಾಯಾಲಯ ಮತ್ತು ನೋಂದಣಾಧಿಕಾರಿಗಳ ಕಚೇರಿಯ ಖರ್ಚುಗಳನ್ನು).

**11. ಕೇಂದ್ರ ಸಭಾದ ನಿಧಿಗಳು/ಬಂಡಾವಳ:–**

ಕೇಂದ್ರ ಸಭಾದ ನಿಧಿಗಳನ್ನು ಈ ಕೆಳಕಂಡ ಮಾರ್ಗಗಳಿಂದ ಸಂಗ್ರಹಿಸಬಹುದಾಗಿರುತ್ತದೆ.

ಎ) ದಾನಗಳು / ಚಂದಾಗಳು

ಬಿ) ದತ್ತಿಗಳು

ಸಿ) ಉಡುಗೊರೆಗಳು ಮತ್ತು ಕಾಣಿಕೆಗಳು

ಡಿ) ಪ್ರವೇಶ ಶುಲ್ಕ / ಸದಸ್ಯತ್ವ ಶುಲ್ಕ

ಇ) ಸಂಭಾವನೆ ಅಥವಾ ಹಣ ಅಥವಾ ವಸ್ತು ರೂಪದ ಕಾಣಿಕೆ

ಎಫ್) ನಿರ್ಧಿಷ್ಟ ಕಾರಣಗಳಿಗಾಗಿ ಸೃಷ್ಟಿಸಿದ ನಿಧಿಗಳು

ಜಿ) ಬಾಡಿಗೆ ಮುಂಗಡ ಮತ್ತಿತರ ಶುಲ್ಕಗಳು

ಹೆಚ್) ಎಲ್ಲಾ ಕಟ್ಟಡದ ಬಾಡಿಗೆ, ಮುಂಗಡ ಹಣ

11(1) ವಾರ್ಷಿಕ ಒಟ್ಟು ಆದಾಯದಲ್ಲಿ ಖರ್ಚನ್ನು ಕಳೆದು ಉಳಿಯುವ ಮೊತ್ತದಲ್ಲಿ ಶೇಕಡ 50ರಷ್ಟು ಮೊತ್ತವನ್ನು ಮರಣ ಪರಿಹಾರ ನಿಧಿ, ಬಾಡಿಗೆ ಮುಂಗಡ ಮತ್ತು ವಿದ್ಯಾರ್ಥಿ ವೇತನದ ಖರ್ಚುಗಳಿಗಾಗಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು.

11(2) ಮೇಲ್ಕಂಡ ಮಾರ್ಗಗಳಿಂದ ಉಪಸಭಾದವರು ಹಣ ಸಂಗ್ರಹಿಸಿದರೆ ಅದನ್ನು ಕೇಂದ್ರ ಸಭಾಗೆ ವರ್ಗಾಯಿಸಬೇಕು.

**12. ಬಂಡವಾಳ :–**

ಸಭಾದ ಬಂಡವಾಳಗಳನ್ನು ಈ ಕೆಳಕಂಡ ಮಾರ್ಗಗಳಲ್ಲಿ ಸಂಗ್ರಹಿಸ–ಬಹುದಾಗಿರುತ್ತದೆ.

(ಎ) ಕೇಂದ್ರ ಸಮಿತಿ ಸಭೆಯಲ್ಲಿ ಉಪಸ್ಥಿತರಾಗಿರುವ ಸದಸ್ಯರಲ್ಲಿ 3/4 ಮತಗಳ ಬಹುಮತದಿಂದ ಸೇರ್ಪಡೆಯ ಶುಲ್ಕ ಮತ್ತಿತರ ಹಣಗಳನ್ನು ಬಂಡವಾಳದ ಖಾತೆಗೆ ವರ್ಗಾಯಿಸಬಹುದು.

(ಬಿ) ಇದರಲ್ಲಿ ಸಂಗ್ರಹವಾದ ಹಣವನ್ನು ಕೇಂದ್ರ ಸಭಾದ ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸಿಕೊಳ್ಳಬಹುದು.

13. ಸಭಾದ ಧ್ಯೇಯೋದ್ದೇಶಗಳ ಸಾಧನೆಗೆಂದು ಬಂಡವಾಳದ ಯಾವ ಭಾಗವನ್ನು ಸಹ ಬಳಸಬಾರದು.

14. ಸಭಾದ ಧ್ಯೇಯೋದ್ದೇಶಗಳ ಸಾಧನೆಗೆಂದು ಸಭಾದ ಇತರೆ ನಿಧಿಗಳಲ್ಲಿನ ಮೊತ್ತಗಳನ್ನು ವೆಚ್ಚ ಮಾಡಬಹುದು.

**15. ಇತರ ನಿಧಿಗಳು:–**

(ಎ) ನಿರ್ಧಿಷ್ಟ ಕಾರಣಗಳಿಗೆಂದು ಸ್ಪಷ್ಟಪಡಿಸಿರುವ ನ್ಯಾಸ ಮತ್ತಿತರ ಕಾಣಿಕೆಗಳನ್ನು ನಿಗದಿತ ಉದ್ದೇಶಗಳಿಗಾಗಿ ಮಾತ್ರ ಬಳಸತಕ್ಕದ್ದು.

ಬಿ) ಕೇಂದ್ರ ಸಮಿತಿಯ ಸಭೆಯಲ್ಲಿ ಉಪಸ್ಥಿತರಿರುವ ಸದಸ್ಯರಲ್ಲಿ 3/4 ಸದಸ್ಯರು ಒಪ್ಪಿಕೊಂಡರೆ ಇತರೆ ಉದ್ದೇಶಗಳಿಗೆ ನಿಧಿಗಳನ್ನು ಸ್ಥಾಪಿಸಬಹುದಾಗಿದೆ.

**16. ಬಂಡವಾಳ ಹೂಡಿಕೆ**

ಎ) ಸಾಮಾನ್ಯವಾಗಿ ಸಭಾದ ಬಂಡವಾಳ ಮತ್ತು ಇತರೆ ನಿಧಿಗಳ ಧನವನ್ನು ಭಾರತೀಯ ನ್ಯಾಸ(ಟ್ರಸ್ಟ್) ಕಾಯಿದೆಯಲ್ಲಿ ನಿಗದಿಪಡಿಸಿರುವ ಸಾಲ ಪತ್ರಗಳಲ್ಲಿ ಹೂಡಲಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾತ್ರ ಹೂಡಿಕೆ ಮಾಡ–ಬಹುದಾಗಿರುತ್ತದೆ ಹಾಗೂ ಸಾಲವನ್ನು ತೆಗೆದುಕೊಳ್ಳಬಹುದಾಗಿರುತ್ತದೆ.

ಬಿ) ಕೇಂದ್ರ ಸಮಿತಿ ಸಭೆಯಲ್ಲಿ ಉಪಸ್ಥಿತರಿರುವ ಸದಸ್ಯರಲ್ಲಿ 3/4 ಮತಗಳ ಬಹುಮತದಿಂದ ಸಭಾದ ಬಂಡವಾಳವನ್ನು ಭೂಮಿ ಮತ್ತಿತರ ಚಿರಾಸ್ತಿಗಳಲ್ಲಿ ಹೂಡಬಹುದು.

**17. ಸಾಲಗಳು :–**

ಈ ವಿಚಾರಕ್ಕೆ ಸಂಬಂಧಪಟ್ಟ ಪ್ರಸ್ತಾವನೆಗಳನ್ನು ಕೇಂದ್ರ ಸಮಿತಿಯ ಹಾಜರಿರುವ ಸದಸ್ಯರಲ್ಲಿ ಬಹುಮತದಿಂದ ಒಪ್ಪಿಗೆ ಪಡೆದು ಒಂದು ಯೋಜನೆಗೆ ಗರಿಷ್ಠ ಐದು ಕೋಟಿ ರೂಪಾಯಿ ಸಾಲವನ್ನು ಸಭಾದ ಉದ್ದೇಶಗಳಿಗಾಗಿ ಕೇಂದ್ರ ಸಮಿತಿಯ ಅನುಮತಿ ಪಡೆದು, ಸರ್ಕಾರ ಖಾತರಿ ನೀಡುವ ರಾಷ್ಟ್ರೀಕೃತ ಬ್ಯಾಂಕ್, ಷೆಡ್ಯೂಲ್ಡ್ ಬ್ಯಾಂಕ್ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲು ಒಪ್ಪಿಗೆ ನೀಡುವ ಅಧಿಕಾರ ಹೊಂದಿರುತ್ತದೆ. ನಂತರ ಇದಕ್ಕೆ ಸರ್ವ ಸದಸ್ಯರ ಸಭೆಯ ಅನುಮೋದನೆ ಪಡೆಯಬೇಕಾಗುತ್ತದೆ.

**18. ಸಭಾದ ನಿಧಿಯನ್ನು ಉಪಯೋಗಿಸುವಿಕೆ :–**

ಕೇಂದ್ರ ಸಮಿತಿಯಲ್ಲಿ ಬಹುಮತದ ಒಪ್ಪಿಗೆ ಪಡೆದು ಸಭಾದ ಆಸ್ತಿಗಳನ್ನು ಭದ್ರತೆ ಅಧಾರದ ಮೇಲೆ ಇಟ್ಟು ಸಾಲವನ್ನು ಪಡೆಯುವ ಅಧಿಕಾರವನ್ನು ಹೊಂದಿದೆ. ನಂತರ ಸರ್ವ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆಯಬೇಕಾಗುತ್ತದೆ.

ಅ) ಸಭಾದ ಹಣಕಾಸನ್ನು ಈ ಮುಂದೆ ಹೆಸರಿಸಿರುವ ಉದ್ದೇಶಗಳಿಗೆ ಸೇರಿದಂತೆ ಸಭಾದ ಧ್ಯೇಯಗಳಿಗಾಗಿ ಬಳಸಿಕೊಳ್ಳತಕ್ಕದ್ದು.

ಆ) ಸಾಮಾನ್ಯ, ತಂತ್ರಜ್ಞಾನ ಮತ್ತು ವೃತ್ತಿಶಿಕ್ಷಣ ತರಬೇತಿಗಾಗಿ ವಿದ್ಯಾರ್ಥಿವೇತನ ಮತ್ತು ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ

ಇ) ಸಮುದಾಯದ ಅಭಿವೃದ್ಧಿಗಾಗಿ ರಾಷ್ಟ್ರೀಯ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆಗಾಗಿ ಆಗುವ ವೆಚ್ಚವನ್ನು ಭರಿಸತಕ್ಕದ್ದು.

ಈ) ಸಾಂಸ್ಕೃತಿಕ, ಧಾರ್ಮಿಕ ಉದ್ಧೇಶಗಳಿಗೆ ಮಾಡುವ ವೆಚ್ಚ ಮತ್ತು ಮರಣೋತ್ತರ ಪರಿಹಾರ ನಿಧಿ ಹಾಗೂ ಇತರ ಯಾವುದೇ ಹೆಬ್ಬಾರ್ ಶ್ರೀವೈಷ್ಣವ ಐಯ್ಯಂಗಾರ್ ಸಮುದಾಯದ ಹಿತಾಸಕ್ತಿಗಳಿಗಾಗಿ, ಅಭಿವೃದ್ಧಿಯ ಉದ್ಧೇಶಗಳಿಗಾಗಿ ಕೇಂದ್ರ ಸಮಿತಿಯು ಪ್ರಾಮಾಣಿಕವೆಂದು 3/4 ಮತಗಳ ಬಹುಮತದಿಂದ ಶಿಫಾರಸ್ಸು ಮಾಡಿದಲ್ಲಿ ಅಂದಿನ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟು–ಕೊಂಡು ಸಭಾದ ಹಣವನ್ನು ಖರ್ಚು ಮಾಡಬಹುದು.

**19. ಸಭಾದ ಸಂವಿಧಾನ** :– ಸಭಾದ ಸರ್ವೋಚ್ಚ ಅಧಿಕಾರವನ್ನು ಸರ್ವ ಸದಸ್ಯರ ಸಭೆಗೆ ಒಪ್ಪಿಸಲಾಗಿರುತ್ತದೆ.

**20. ಆಡಳಿತ ನಿರ್ವಹಣೆ** :– ಸಭಾದ ಎಲ್ಲಾ ಆಡಳಿತವನ್ನು ಅಧ್ಯಕ್ಷರ ಉಸ್ತುವಾರಿಯಲ್ಲಿ ಕೇಂದ್ರ ಸಮಿತಿಯು ನಿರ್ವಹಿಸುವುದು.

ಅ) ಸಭಾದ ಕೇಂದ್ರ ಸಮಿತಿಯ ಸದಸ್ಯರು, ಉಪಸಭಾಗಳಿಂದ ಮೂರು ವರ್ಷಕ್ಕೊಮ್ಮೆ ಆಯ್ಕೆಯಾಗುತ್ತಾರೆ. ಈ ಉದ್ಧೇಶಕ್ಕಾಗಿ ಉಪಸಭಾದಿಂದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡುವ ಅಧಿಕಾರ ಪ್ರತಿ ಉಪಸಭಾಕ್ಕೆ ಇದೆ. ಉಪನಿಯಮಗಳ ಪ್ರಕಾರ ಕೇಂದ್ರ ಸಮಿತಿ ಮತ್ತು ಉಪಸಭಾ ಕಾರ್ಯಕಾರಿ ಸಮಿತಿಯ ಅವಧಿ ಮೂರು ವರ್ಷಗಳು. ಕಾರಣಾಂತರಗಳಿಂದ ಈ ಅವಧಿಯಲ್ಲಿ ಸದಸ್ಯರು ಮುಂದುವರಿಯಲು ಸಾಧ್ಯವಾಗದೆ ಇದ್ದರೆ, ಉಪಸಭಾದಿಂದ ಬೇರೆ ಸದಸ್ಯರನ್ನು 6 ತಿಂಗಳ ಒಳಗೆ ಉಳಿದ ಅವಧಿಗೆ ಆಯ್ಕೆ ಮಾಡಿ ಕಳುಹಿಸಬಹುದು. ಇವರು ಉಳಿದ ಅವಧಿಗೆ

ಮುಂದುವರಿಯುತ್ತಾರೆ. ಆ ಸದಸ್ಯರನ್ನು ಕೂಡ ಒಂದು ಅವಧಿ ಎಂದು ಪರಿಗಣಿಸಲಾಗುವುದು. 3 ವರ್ಷದ ಅವಧಿ ಮುಗಿದ ನಂತರ, 6 ತಿಂಗಳ ಒಳಗೆ ಚುನಾವಣೆಯನ್ನು ನಡೆಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಅನಿವಾರ್ಯ ಕಾರಣಗಳಿಂದ ಚುನಾವಣೆಯನ್ನು ನಡೆಸಲು ಸಾಧ್ಯವಾಗದಿದ್ದರೆ ಕೇಂದ್ರ ಸಮಿತಿ ಸಭೆಯ ಅನುಮೋದನೆ ಪಡೆದು ಮತ್ತೆ 6 ತಿಂಗಳ ಒಳಗೆ ಚುನಾವಣೆ ನಡೆಸಲು ಅವಕಾಶ ಇರುತ್ತದೆ. ಯಾವುದೇ ಕಾರಣಕ್ಕೂ (ಕಾನೂನು ಕಟ್ಟಳೆಗೆ ಹೊರತು ಪಡಿಸಿ) ಈ 6 ತಿಂಗಳ ಅವಧಿಯನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ.

ಆಡಳಿತ ಮಂಡಳಿ ಸದಸ್ಯರು ಸಭಾ ಕಚೇರಿಗೆ ಬರಲು ಮತ್ತು ಆಡಳಿತ ಮಂಡಳಿ ಸಭೆಗೆ ಹಾಜರಾಗಲು ಪ್ರಯಾಣ ಭತ್ಯೆಯನ್ನು ಪಡೆಯಬಹುದು ಮತ್ತು ಇದನ್ನು ಕಾಲಕಾಲಕ್ಕೆ ಕೇಂದ್ರ ಸಮಿತಿ ಸಭೆಯಲ್ಲಿ ನಿಗಧಿಪಡಿಸಲಾಗುವುದು.

ಆ) ಕೇಂದ್ರ ಸಮಿತಿಯು ಸರ್ವಾನುಮತದ ಆಯ್ಕೆ ಅಸಾಧ್ಯವಾದರೆ ತನ್ನ ಮೊದಲ ಸಭೆಯಲ್ಲಿ ಗುಪ್ತ ಮತದಾನದ ಮೂಲಕ, ಒಬ್ಬರು ಗೌರವ ಅಧ್ಯಕ್ಷರು, ಇಬ್ಬರು ಗೌರವ ಉಪಾಧ್ಯಕ್ಷರು (ಒಬ್ಬರು ಬೆಂಗಳೂರು ಉಪಸಭಾದಿಂದ ಮತ್ತು ಇನ್ನೊಬ್ಬರು ಬೆಂಗಳೂರಿನ ಹೊರಗಿನಿಂದ) ಗೌರವ ಕಾರ್ಯದರ್ಶಿ (ಬೆಂಗಳೂರು ಉಪಸಭಾದಿಂದ) ಗೌರವ ಜಂಟಿ ಕಾರ್ಯದರ್ಶಿ (ಬೆಂಗಳೂರಿನ ಹೊರಗಿನಿಂದ) ಗೌರವ ಮಹಿಳಾ ಜಂಟಿ ಕಾರ್ಯದರ್ಶಿ (ಯಾವುದಾದರು ಉಪಸಭಾದಿಂದ) ಒಬ್ಬರು – ಗೌರವ ಖಜಾಂಚಿ – ಬೆಂಗಳೂರು ಉಪಸಭಾದಿಂದ ಆಯ್ಕೆ ಮಾಡತಕ್ಕದ್ದು. ಇವರೆಲ್ಲರೂ ಸಹ ಮುಖ್ಯ ಸಭಾದ ಆಡಳಿತ ಮಂಡಳಿಯ ಪದಾಧಿಕಾರಿಗಳಾಗಿರುತ್ತಾರೆ.

**ಟಿಪ್ಪಣಿ :–** ಕೇಂದ್ರ ಸಮಿತಿಯ ಅವಧಿಯು 3 ವರ್ಷಗಳಿದ್ದು, ಅದರ ಪ್ರಕಾರವೇ ಕೇಂದ್ರ ಆಡಳಿತ ಮಂಡಳಿ ಪದಾಧಿಕಾರಿಗಳ ಅವಧಿಯೂ ಸಹ 3 ವರ್ಷಗಳಿರುತ್ತದೆ. ಈ 3 ವರ್ಷದ

ಅವಧಿಯ ಮಧ್ಯದಲ್ಲಿ ಕಾರಣಾಂತರಗಳಿಂದ ಕೇಂದ್ರ ಸಮಿತಿಯಲ್ಲಿ ಸದಸ್ಯರ ಸ್ಥಾನ ಖಾಲಿಯಾದರೆ ಸಂಬಂಧಪಟ್ಟ ಉಪಸಭಾದವರು ಅವರ ಕಾರ್ಯಕಾರಿ ಸಮಿತಿ ಸದಸ್ಯರ ಒಬ್ಬರನ್ನು ಉಳಿದ ಅವಧಿಗೆ ಕೇಂದ್ರ ಸಮಿತಿಗೆ ಆಯ್ಕೆ ಮಾಡಿ ಕಳುಹಿಸಬಹುದು. ಇಂತಹ ಸದಸ್ಯರನ್ನು ಒಂದು ಅವಧಿ ಎಂದು ಪರಿಗಣಿಸಲಾಗುವುದು. ಕೇಂದ್ರ ಸಮಿತಿಯ ಅವಧಿಯು 3 ವರ್ಷಗಳಾಗಿರುತ್ತದೆ. 3 ವರ್ಷದ ಅವಧಿ ಮುಗಿದ ನಂತರ 6 ತಿಂಗಳ ಒಳಗೆ ಚುನಾವಣೆಯನ್ನು ನಡೆಸಬೇಕು. ಈ ಅವಧಿಯಲ್ಲಿ ಚುನಾವಣೆಯನ್ನು ನಡೆಸಲು ಸಾಧ್ಯವಾಗದಿದ್ದರೆ, ಕೇಂದ್ರ ಸಮಿತಿಯ ಅನುಮತಿಯೊಂದಿಗೆ ಮತ್ತೆ 6 ತಿಂಗಳ ಒಳಗೆ ಚುನಾವಣೆಯನ್ನು ನಡೆಸಬೇಕಾಗುತ್ತದೆ. ಅಧ್ಯಕ್ಷರ ಸ್ಥಾನ ತೆರೆವಾದರೆ ಉಪಾಧ್ಯಕ್ಷರು ಹಂಗಾಮಿ ಅಧ್ಯಕ್ಷರಾಗಿ ಕಾರ್ಯ-ನಿರ್ವಹಿಸುತ್ತಾರೆ ಮತ್ತು ಕೇಂದ್ರ ಸಮಿತಿಯಿಂದ ಖಾಯಂ ಅಧ್ಯಕ್ಷರ ಚುನಾವಣೆಯು 3 ತಿಂಗಳಲ್ಲಿ ಸಂಪೂರ್ಣ-ಗೊಳ್ಳಬೇಕು. ಇತರೆ ಪದಾಧಿಕಾರಿಗಳು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದರೆ ಅಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಬಹುದು. ಇತರೆ ಪದಾಧಿಕಾರಿಗಳ ಸ್ಥಾನ ತೆರವಾದರೆ ಕೇಂದ್ರ ಸಮಿತಿಯ ಅನುಮತಿಯಿಂದ ಸರ್ವಾನುಮತದಿಂದ ಅಥವಾ ಉಪಚುನಾವಣೆ ಮೂಲಕ ಆ ಸ್ಥಾನಕ್ಕೆ ಅರ್ಹ ಸದಸ್ಯರನ್ನು 3 ತಿಂಗಳ ಒಳಗೆ ಚುನಾಯಿಸಬೇಕು. ಕೇಂದ್ರ ಸಮಿತಿ ಸದಸ್ಯರು ವಿಶೇಷ / ಸರ್ವ ಸದಸ್ಯರ ಸಭೆಯಲ್ಲಿ ಅಧ್ಯಕ್ಷರ ಅನುಮತಿಯ ಮೇರೆಗೆ ತಮ್ಮ ಕೇಂದ್ರ ಸಮಿತಿ ಸದಸ್ಯತ್ವಕ್ಕೆ ರಾಜಿನಾಮೆ ನೀಡಿ ಮಾತನಾಡಬಹುದು.

ಇ) ಪದವಿಯಿಂದ ಬಿಡುಗಡೆಗೊಂಡ ಗೌರವ ಕಾರ್ಯದರ್ಶಿಗಳು ಚುನಾವಣೆಯಾದ 10 ದಿವಸದ ಒಳಗೆ ಹೊಸದಾಗಿ ಆಯ್ಕೆಯಾದ ಕೇಂದ್ರ ಸಮಿತಿ ಸಭೆಯನ್ನು ಕರೆಯತಕ್ಕದ್ದು ಮತ್ತು ಈ ಸಭೆಯ ಅಧ್ಯಕ್ಷತೆಯನ್ನು ಪದವಿಯಿಂದ ಬಿಡುಗಡೆಗೊಂಡ ಅಧ್ಯಕ್ಷರು ಅಥವಾ ಗೌರವ

ಕಾರ್ಯದರ್ಶಿಗಳಲ್ಲೊಬ್ಬರು ವಹಿಸತಕ್ಕದ್ದು ಮತ್ತು ಅವರು ಪದಾಧಿಕಾರಿಗಳ ಆಯ್ಕೆಯನ್ನು ನಡೆಸತಕ್ಕದ್ದು. ಖಜಾಂಚಿಗಳು ಹಿಂದಿನ ಅವಧಿಯ ಲೆಕ್ಕ ಪತ್ರಗಳ ವರದಿಯನ್ನು ನೂತನ ಖಜಾಂಚಿಗಳಿಗೆ ವಹಿಸತಕ್ಕದ್ದು.

(ಈ) ಕೇಂದ್ರ ಸಭಾದ ಲೆಕ್ಕ ಪರಿಶೋಧಕರನ್ನು ಕೇಂದ್ರ ಸಮಿತಿಯು ಆಯ್ಕೆ ಮಾಡುತ್ತದೆ. ಅಂತಹ ಲೆಕ್ಕ ಪರಿಶೋಧಕರು ಕೇಂದ್ರ ಸಮಿತಿಯ ಸದಸ್ಯರಾಗಿರಬಾರದು.

ಉ) ಕೇಂದ್ರ ಸಮಿತಿಯು ಯಾವುದೇ ಪದಾಧಿಕಾರಿಯನ್ನು/ ಸದಸ್ಯರನ್ನು ಅವರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಕೈಗೊಳ್ಳುವ ಮೂಲಕ ಉಚ್ಚಾಟಿಸಲು ಅಧಿಕಾರವನ್ನು ಹೊಂದಿದೆ ಆದರೆ ಅಂತಹ ಸದಸ್ಯರ ರಕ್ಷಣೆಗಾಗಿ ಸಹಜ ನ್ಯಾಯದ ನೀತಿಯ ಪ್ರಕಾರ ಸಂಪೂರ್ಣ ಅವಕಾಶವನ್ನು ನೀಡುವುದು. ಅಗತ್ಯವಾದಲ್ಲಿ ಅಧ್ಯಕ್ಷರ ಸಹಾಯವನ್ನು ಒದಗಿಸುವುದು. ನಿರ್ಣಯವನ್ನು ಮತಕ್ಕೆ ಹಾಕುವ ಮೊದಲು ಅನುಸರಿಸಬೇಕಾದ ಕ್ರಮಗಳಾಗಿರುತ್ತದೆ. ಈ ವಿಧಿಗಳನ್ನು ಆಚರಿಸಿದ ನಂತರವೇ ಅವಿಶ್ವಾಸ ನಿರ್ಣಯವನ್ನು ಮಂಡಿಸಬೇಕು. ಅಂತಹ ಅವಿಶ್ವಾಸ ನಿರ್ಣಯವು ಅಧ್ಯಕ್ಷರ ವಿರುದ್ಧವಾಗಿದ್ದರೆ, ಉಪಾಧ್ಯಕ್ಷರು ಆ ಸಭೆಯ ಅಧ್ಯಕ್ಷತೆಯನ್ನು ವಹಿಸುವರು ಮತ್ತು ನಿರ್ಣಯವನ್ನು ಮಂಡಿಸುವರು. ಅವಿಶ್ವಾಸ ನಿರ್ಣಯ ಅಂಗೀಕಾರವಾದರೆ, ಅಂತಹ ಪದಾಧಿಕಾರಿಗಳ ಸ್ಥಾನಕ್ಕೆ ಹೊಸದಾಗಿ ಉಪಚುನಾವಣೆಯ ಮೂಲಕವೇ ಆಯ್ಕೆ ಮಾಡತಕ್ಕದ್ದು. ಇತರೆ ಯಾವುದೇ ಕಾರಣದಿಂದ ಆಡಳಿತ ಮಂಡಳಿ ಸದಸ್ಯರ ಸ್ಥಾನ ತೆರವಾದರೆ ಅಂತಹ ಪದಾಧಿಕಾರಿಗಳ ಸ್ಥಾನಕ್ಕೆ ಹೊಸದಾಗಿ ಉಪಚುನಾವಣೆಯ ಮೂಲಕವೇ ಆಯ್ಕೆ ಮಾಡತಕ್ಕದ್ದು. ಒಮ್ಮೆ ಚುನಾಯಿತರಾದ ಸದಸ್ಯರು ಮಧ್ಯದಲ್ಲಿ ಮನೆ ಬದಲಾವಣೆ ಮಾಡಿದ ಸಂದರ್ಭದಲ್ಲಿ, ಅವರ ಅವಧಿ ಮುಗಿಯುವವರೆಗೂ ಅವರು ಅದೇ ಹುದ್ದೆಯಲ್ಲಿ ಮುಂದುವರಿಯುತ್ತಾರೆ.

ಊ) ಸಭಾದ ಆಜೀವ ಸದಸ್ಯರುಗಳು, ಕೇಂದ್ರ ಸಮಿತಿ ಸದಸ್ಯರುಗಳು ಅಥವಾ ಆಡಳಿತ ಮಂಡಳಿ ಪದಾಧಿಕಾರಿಗಳು, ಉಪಸಭೆಯ ಕಾರ್ಯಕಾರಿ ಸಮಿತಿ ಸದಸ್ಯರುಗಳು (ಒಬ್ಬರು ಅಥವಾ ಜಂಟಿಯಾಗಿ) ಯಾವುದೇ ರೀತಿಯ ಸಭಾದ/ಉಪಸಭಾದ ಹಣಕಾಸಿನ ದುರುಪಯೋಗ/ ಅವ್ಯವಹಾರಗಳು, ಕೇಂದ್ರ ಸಭಾದ ಉಪನಿಯಮಗಳ/ ಆದೇಶ/ಸೂಚನೆಗಳ ವಿರುದ್ಧವಾಗಿ ವರ್ತಿಸುವುದು/ ಕಾರ್ಯನಿರ್ವಹಿಸುವುದು, ಸಭಾದ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿ ಕಾರ್ಯ ಚಟುವಟಿಕೆಗಳು ಕಂಡು ಬಂದಲ್ಲಿ / ದೂರು ಬಂದಲ್ಲಿ ಅಂತಹ ಸಂದರ್ಭಗಳಲ್ಲಿ ಕೇಂದ್ರ ಸಮಿತಿಯು ಸ್ವಯಂ ಪ್ರೇರಿತವಾಗಿ ಅಥವಾ ದೂರಿನ ಮೇಲೆ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬಹುದು.

ಎ(1) ಕೇಂದ್ರ ಸಮಿತಿಯ ಸದಸ್ಯರುಗಳು ಒಳಗೊಂಡ ಶಿಸ್ತು ಸಮಿತಿ ರಚಿಸಿ ಅವರಿಂದ ವರದಿ ಪಡೆದು ಕ್ರಮ ಜರುಗಿಸಬಹುದು.

ಎ(2) ಹಣಕಾಸಿನ ದುರುಪಯೋಗದ ಆಪಾದನೆ ಇದ್ದಲ್ಲಿ ಅಂತಹ ವ್ಯಕ್ತಿ/ಉಪಸಭಾದ ಆಡಳಿತ ಮಂಡಳಿ/ಕಾರ್ಯಕಾರಿ ಸಮಿತಿಯನ್ನು ತಾತ್ಕಾಲಿಕವಾಗಿ ಅಮಾನತಿನಲ್ಲಿ ಇಟ್ಟು ಶಿಸ್ತು ಸಮಿತಿಯಿಂದ ವರದಿ ಪಡೆದು ಕ್ರಮ ಜರುಗಿಸಬಹುದು ಮತ್ತು ಆ ಆವಧಿಯಲ್ಲಿ ಕೇಂದ್ರ ಸಭೆಯು ಆಡಳಿತಾಧಿಕಾರಿಯನ್ನು ನೇಮಿಸಿ ಉಪಸಭಾದ ಕಾರ್ಯಗಳನ್ನು ನಿರ್ವಹಿಸಬಹುದು.

ಎ(3) ಶಿಸ್ತು ಸಮಿತಿಯ ವರದಿ ಬಂದ ನಂತರ ಅಪಾದನೆಗಳು ರುಜುವಾತಾದಲ್ಲಿ ಕೇಂದ್ರ ಸಮಿತಿಯ ಮುಂದೆ ಮಂಡಿಸಿ ಒಪ್ಪಿಗೆ ಪಡೆದು ಈ ಕೆಳಕಂಡ ಕ್ರಮಗಳನ್ನು ಕೇಂದ್ರ ಸಭೆಯ ಆಡಳಿತ ಮಂಡಳಿಯು ತೆಗೆದುಕೊಳ್ಳಬಹುದು.

ಅ) ಆಪಾದನೆಗಳು ಆಜೀವ ಸದಸ್ಯರ ಮೇಲಾದಲ್ಲಿ ಅಂತಹ ಸದಸ್ಯರಿಗೆ ಕೊನೆಯ ತಿಳುವಳಿಕೆ ಪತ್ರ ಜಾರಿ ಮಾಡಿ ಅವರ ಸದಸ್ಯತ್ವವನ್ನು ಅಮಾನತ್ತಿನಲ್ಲಿ ಇಟ್ಟು, ಸರ್ವಸದಸ್ಯರ ಸಭೆಗೆ ಅವರನ್ನು ಸದಸ್ಯತ್ವದಿಂದ ತೆಗೆದುಹಾಕಲು ಶಿಫಾರಸ್ಸು ಮಾಡುವುದು.

ಆ) ಹಣಕಾಸಿನ ದುರುಪಯೋಗದ ಆಪಾದನೆಗಳು ರುಜುವಾತಾದಲ್ಲಿ ಅಂತಹ ಸದಸ್ಯರ ಅಥವಾ ಉಪಸಭಾಗಳ ಮೇಲೆ ಪೊಲೀಸರಿಗೆ / ಕೋರ್ಟಿನಲ್ಲಿ ದೂರು / ಮೊಕದ್ದಮೆ ದಾಖಲಿಸಬಹುದು.

ಇ) ಮೇಲಿನ 'ಆ' ಪ್ರಕಾರದ ಉಪಸಭಾಗಳನ್ನು ಬರಕಾಸ್ತು ಮಾಡಿ ಚುನಾವಣೆಯ ಮೂಲಕ ನೂತನ ಕಾರ್ಯಕಾರಿ ಸಮಿತಿಯನ್ನು ತರುವುದು.

ಬಿ) ಕೇಂದ್ರ ಸಮಿತಿ ಸಭೆಯಲ್ಲಿ ಅಥವಾ ಉಪಸಭೆಗಳಲ್ಲಿಯಾಗಲಿ ಅವಿಶ್ವಾಸ ಗೊತ್ತುವಳಿ ನಿರ್ಣಯ ಜಾರಿಗೊಳಿಸುವ ಮೂಲಕ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ತೆಗೆಯಬಹುದು.

**ಎ(4) ಕೇಂದ್ರ ಸಭಾ**

ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ಈ ಕೆಳಕಂಡಂತೆ ಪಾಲಿಸಬೇಕು. ಯಾವುದೇ ಕೇಂದ್ರ ಸಮಿತಿ ಸದಸ್ಯರು ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲು ಬಯಸಿದ್ದಲ್ಲಿ ಸಮರ್ಥನೆಯೊಂದಿಗೆ ಉದ್ದೇಶವನ್ನು ಕನಿಷ್ಠ 30 ದಿನಗಳ ಮುಂಚಿತವಾಗಿ ಕಾರ್ಯದರ್ಶಿಗಳಿಗೆ ತಿಳಿಸಿ, ಲಿಖಿತ ರೂಪದಲ್ಲಿ ಮನವಿ ನೀಡಬೇಕು. ಕಾರ್ಯದರ್ಶಿಯು ಈ ಮನವಿಯ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ, ಕೇಂದ್ರ ಸಮಿತಿ ಸಭೆಯ (ವಿಷಯಸೂಚಿಯಲ್ಲಿ) ಅಜೆಂಡಾದಲ್ಲಿನ ವಿಷಯದಲ್ಲಿ ಸೇರ್ಪಡೆಗಾಗಿ ಪದಾಧಿಕಾರಿಗಳ ಮುಂದಿಡ-ಬೇಕು. ಈ ಗೊತ್ತುವಳಿಯನ್ನು ಸೇರಿಸಿದ ನಂತರ ಸೇರ್ಪಡೆಯೊಂದಿಗೆ ಈ ಗೊತ್ತುವಳಿಯು ಅಧ್ಯಕ್ಷರ ವಿರುದ್ಧ-ವಾಗಿದ್ದಲ್ಲಿ, ಆಗ ಉಪಾಧ್ಯಕ್ಷರು ಕೇಂದ್ರ ಸಮಿತಿಯ ಅಧ್ಯಕ್ಷತೆಯನ್ನು ವಹಿಸುವರು ಅಥವಾ ಗೊತ್ತುವಳಿ ನಿರ್ಣಯವು ಯಾವುದೇ ಪದಾಧಿಕಾರಿ ಸದಸ್ಯನ ವಿರುದ್ಧವಾಗಿದ್ದಲ್ಲಿ, ಆಗ ಕೇಂದ್ರ ಸಮಿತಿಯ ಅಧ್ಯಕ್ಷತೆಯನ್ನು ಅಧ್ಯಕ್ಷರೆ ವಹಿಸುತ್ತಾರೆ. ಈ ಸಂದರ್ಭದಲ್ಲಿ ಸ್ವಾಭಾವಿಕ ನ್ಯಾಯುವಾದ ತತ್ವಗಳಿಗೆ ಅನುಗುಣವಾಗಿ, ಈ ಗೊತ್ತುವಳಿಯಲ್ಲಿ ಹೆಸರಿಸಲಾಗಿರುವ ವ್ಯಕ್ತಿಗೆ ಹೇಳಿಕೆ ನೀಡಲು ಅವಕಾಶವಿರುತ್ತದೆ.

ಈ ಗೊತ್ತುವಳಿ ನಿರ್ಣಯವನ್ನು ಸಭೆಯಲ್ಲಿ ಪೂರ್ಣವಾಗಿ ವಿವರಿಸಿ, ಚರ್ಚಿಸಲಾಗುತ್ತದೆ ಮತ್ತು ಇದನ್ನು ಎದುರಿಸುತ್ತಿರುವ ವ್ಯಕ್ತಿಗೆ ಅಗತ್ಯ ಸಮರ್ಥನೆಗೆ ಎಲ್ಲಾ ಅವಕಾಶಗಳನ್ನು ಸಹ ನೀಡಲಾಗುತ್ತದೆ. ಇದು ಯಾವುದೇ ಪದಾಧಿಕಾರಿ ಸದಸ್ಯನ ವಿರುದ್ಧವಾಗಿದ್ದಲ್ಲಿ, ಅಧ್ಯಕ್ಷರು ಆ ನಿರ್ಣಯದ ವಿರುದ್ಧ ತನ್ನ ಸಹೋದ್ಯೋಗಿ ಸದಸ್ಯನ ಪರವಾಗಿ ಹೇಳಿಕೆ ನೀಡಬಹುದಾಗಿರುತ್ತದೆ.

ಆ ನಿರ್ಣಯದ ಮೇಲೆ ಸಂಪೂರ್ಣ ಚರ್ಚೆಯ ಬಳಿಕ, ಮತ ಚಲಾಯಿಸಲು ಕೇಂದ್ರ ಸಮಿತಿಯ ಮುಂದೆ ತರಲಾಗುತ್ತದೆ. ಹಾಜರಿರುವ ಸದಸ್ಯರಲ್ಲಿ ಹೆಚ್ಚು ಸದಸ್ಯರು ನಿರ್ಣಯದ ಪರವಾಗಿ ಮತವನ್ನು ಚಲಾಯಿಸಿದರೆ, ಆ ವ್ಯಕ್ತಿ ಆ ಸ್ಥಾನ ಮತ್ತು ಹುದ್ದೆಯನ್ನು ತ್ಯಜಿಸಿರುತ್ತಾರೆ ಎಂದು ನಂಬಲಾಗುತ್ತದೆ. ಅಧ್ಯಕ್ಷರು ಏನಾದರೂ ಹುದ್ದೆಯನ್ನು ತ್ಯಜಿಸುವ ಸಂದರ್ಭ ಒದಗಿಬಂದಲ್ಲಿ ಆದೇ ದಿನವೇ ಉಪಾಧ್ಯಕ್ಷರು ಆ ಸ್ಥಾನವನ್ನು ವಹಿಸಿಕೊಂಡು, ಉಸ್ತುವಾರಿ ಅಧ್ಯಕ್ಷರಾಗಿ ಕಾರ್ಯ-ನಿರ್ವಹಿಸುತ್ತಾರೆ. ಕಾರ್ಯದರ್ಶಿಯು ಪೂರ್ಣಾವಧಿ ಅಧ್ಯಕ್ಷರ ಅಥವಾ ಯಾವುದೇ ಪದಾಧಿಕಾರಿ ಸದಸ್ಯತ್ವದ ಸ್ಥಾನದ ಆಯ್ಕೆಗೆ ಸಂಬಂಧಿಸಿದಂತೆ ಮೂರು ತಿಂಗಳುಗಳೊಳಗೆ ಅಗತ್ಯ ವೇಳಾಪಟ್ಟಿಯನ್ನು ಸಿದ್ದಪಡಿಸಿ, ಈ ಉದ್ದೇಶಕ್ಕಾಗಿ ಮುಂದಿನ ಕೇಂದ್ರ ಸಮಿತಿಯ ಸಭೆಯನ್ನು ಏರ್ಪಡಿಸುವ ಅಥವಾ ವಿಶೇಷ ಕೇಂದ್ರ ಸಮಿತಿ ಸಭೆಯನ್ನು ಸಹ ಕರೆಯ-ಬಹುದಾಗಿದೆ.

**ಎ(5) ಉಪಸಭಾ:**

ಉಪಸಭಾ ಕಾರ್ಯಕಾರಿ ಸಮಿತಿಯ ಯಾವುದೇ ಸದಸ್ಯರು ಅಧ್ಯಕ್ಷರ ಮೇಲೆ ಅಥವಾ ಪದಾಧಿಕಾರಿ ಸದಸ್ಯರ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಬೇಕೆಂದಿದ್ದರೆ, ಅದರ ಸೂಚನೆಯನ್ನು ಉಪಸಭಾ ಕಾರ್ಯದರ್ಶಿಗೆ 30 ದಿನಗಳ ಮುಂಚೆ ತಲುಪಿಸತಕ್ಕದ್ದು. ಕಾರ್ಯದರ್ಶಿಯು ಅಂತಹ ಸೂಚನೆ ತಲುಪಿದ ಕೂಡಲೇ ಅದನ್ನು ಸಭೆಯ

ಕಾರ್ಯಸೂಚಿಯಲ್ಲಿ ಸೇರಿಸಿ, ಪದಾಧಿಕಾರಿಗಳ ಮುಂದೆ ಇರಿಸತಕ್ಕದ್ದು. ಈ ಗೊತ್ತುವಳಿಯು ಸೇರ್ಪಡೆಯಾದ ಕೂಡಲೆ ಆ ಗೊತ್ತುವಳಿಯು ಅಧ್ಯಕ್ಷರ ವಿರುದ್ಧವಾಗಿದ್ದರೆ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಉಪಾಧ್ಯಕ್ಷರಾಗಲಿ ವಯಸ್ಸಿನಲ್ಲಿ ಅತಿ ಹಿರಿಯ ಕಾರ್ಯಕಾರಿ ಸಮಿತಿಯ ಸದಸ್ಯರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಗೊತ್ತುವಳಿಯು ಇತರ ಪದಾಧಿಕಾರಿಯ ಸದಸ್ಯರ ವಿರುದ್ಧವಾಗಿದ್ದರೆ, ಅಂತಹ ಸಭೆಯಲ್ಲಿ ಅಧ್ಯಕ್ಷರೇ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಗೊತ್ತುವಳಿಯನ್ನು ವಿವರವಾಗಿ ಚರ್ಚಿಸಲಾಗುವುದು ಮತ್ತು ಅವಿಶ್ವಾಸವನ್ನು ಎದುರಿಸುತ್ತಿರುವ ಸದಸ್ಯರಿಗೆ ಸಹಜ ನ್ಯಾಯ ನೀತಿಯ ಪ್ರಕಾರ, ತನ್ನನ್ನು ರಕ್ಷಿಸಿಕೊಳ್ಳಲು ಎಲ್ಲಾ ಅವಕಾಶವನ್ನೂ ನೀಡಲಾಗುವುದು ಮತ್ತು ಅಂತಹ ಗೊತ್ತುವಳಿಯು ಪದಾಧಿಕಾರಿ ಸದಸ್ಯರ ವಿರುದ್ಧವಾಗಿದ್ದರೆ ಅಧ್ಯಕ್ಷರೂ ಸಹ ಗೊತ್ತುವಳಿಯ ವಿರುದ್ಧ ತನ್ನ ಸಹೋದ್ಯೋಗಿಯ ಪರವಾಗಿರಲು ಅವಕಾಶ ನೀಡಲಾಗುವುದು. ಗೊತ್ತುವಳಿಯ ಮೇಲೆ ವಿವರವಾದ ಚರ್ಚೆಯನ್ನು ನಡೆಸಿದ ನಂತರ ಅದನ್ನು ಕಾರ್ಯಕಾರಿ ಸಮಿತಿಗೆ ಮತದಾನಕ್ಕೆ ಒಪ್ಪಿಸಲಾಗುವುದು. ಗೊತ್ತುವಳಿಯ ಪರವಾಗಿ ಬಹುಸಂಖ್ಯೆ ಮತದಾನವಾದರೆ, ಅಂತಹ ಪದಾಧಿಕಾರಿ ಸದಸ್ಯರನ್ನು ಅವರ ಸ್ಥಾನದಿಂದ ಉಚ್ಚಾಟನೆಗೊಳಿಸಲಾಗಿದೆ ಎಂದು ತಿಳಿಯತಕ್ಕದ್ದು. ಅಧ್ಯಕ್ಷರನ್ನೇ ಉಚ್ಚಾಟಿಸಲಾಗಿದ್ದರೆ ಉಪಾಧ್ಯಕ್ಷರು ಅಥವಾ ವಯಸ್ಸಿನ ಪ್ರಕಾರ ಅತಿ ಹಿರಿಯ ಸದಸ್ಯರು ಅದೇ ದಿವಸ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವರು. ಈ ಮಾಹಿತಿ ತಿಳಿದನಂತರ, ಪ್ರಧಾನ ಸಭಾದ ಕಾರ್ಯದರ್ಶಿಯವರು ಖಾಯಂ ಅಧ್ಯಕ್ಷರ ಅಥವಾ ಪದಾಧಿಕಾರಿಗಳಲ್ಲಿ ಯಾವುದೇ ಸದಸ್ಯರ ಆಯ್ಕೆಗಾಗಿ ಮುಂದಿನ ಮೂರು ತಿಂಗಳುಗಳೊಳಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚುನಾವಣೆಗೆ ಅಗತ್ಯ ಕ್ರಮಗಳು ಅಥವಾ ಒಂದು ವಿಶೇಷ ಕಾರ್ಯಕಾರಿ ಸಮಿತಿಯ ಸಭೆಯನ್ನು ಈ ಉದ್ದೇಶಕ್ಕಾಗಿ ಕರೆಯಬಹುದು.

ಎ(6) **ಕೇಂದ್ರ ಸಮಿತಿಯ ಸಭೆಗೆ ಕನಿಷ್ಠ ಹಾಜರಾತಿ :–** ಒಟ್ಟು ಸದಸ್ಯರ ಸಂಖ್ಯೆಯಲ್ಲಿ ಮೂರನೇ ಒಂದು ಭಾಗ ಸಭೆಗೆ ನಿಗಧಿತ ಸಮಯದ ಅರ್ಧಗಂಟೆಯಲ್ಲಿ ಕನಿಷ್ಠ ಹಾಜರಾತಿ ಇಲ್ಲದಿದ್ದ ಪಕ್ಷದಲ್ಲಿ ಸಭೆಯನ್ನು ಮುಂದೂಡಲಾಗುತ್ತದೆ. ಆನಂತರ ಮುಂದೂಡಲಾದ ಸಭೆಯನ್ನು ಕನಿಷ್ಠ ಹಾಜರಾತಿಯ ಅಗತ್ಯವಿಲ್ಲದೆ ನಡೆಸಬಹುದು.

ಋ) ಕೇಂದ್ರ ಸಮಿತಿ ಸದಸ್ಯರು, ಕೇಂದ್ರ ಸಮಿತಿ ಸಭೆಗೆ ಬರಲು ಸಾಧ್ಯವಾಗದಿದ್ದರೆ, ಸಭೆ ಪ್ರಾರಂಭವಾಗುವ ಮುಂಚೆ ಕಛೇರಿಗೆ ದೂರವಾಣಿ ಮೂಲಕ ರಜೆಯ ಬಗ್ಗೆ ತಿಳಿಸಬೇಕು ಹಾಗೂ ಲಿಖಿತವಾಗಿ ರಜೆ ಪತ್ರವನ್ನು ಕಳುಹಿಸಬೇಕು. ಪೂರ್ವಭಾವಿ ಅನುಮತಿಯಿಲ್ಲದೆ ಸತತವಾಗಿ 3 ಸಭೆಗಳಿಗೆ ಗೈರು–ಹಾಜರಾದರೆ ಅವರು ತಮ್ಮ ಕೇಂದ್ರ ಸಮಿತಿಯ ಸದಸ್ಯತ್ವವನ್ನು ಕಳೆದುಕೊಳ್ಳುವರು. ಈ ನಿಯಮವು ಉಪಸಭಾಗಳಿಗೂ ಅನ್ವಯವಾಗುತ್ತದೆ. ಸಂಬಂಧಪಟ್ಟ ಉಪಸಭೆಯು ಉಳಿದ ಅವಧಿಗೆ 3 ತಿಂಗಳ ಒಳಗೆ ತಮ್ಮ ಕಾರ್ಯಕಾರಿ ಸಮಿತಿಯಿಂದ ಒಬ್ಬ ಸದಸ್ಯರನ್ನು ಇವರ ಸ್ಥಾನಕ್ಕೆ ಆಯ್ಕೆ ಮಾಡಿ ಕಳುಹಿಸಬಹುದು. ಇವರನ್ನು ಉಳಿದ ಅವಧಿಗೆ ಒಂದು ಅವಧಿ ಎಂದೇ ಪರಿಗಣಿಸಲಾಗುವುದು. ಕೇಂದ್ರ ಸಮಿತಿ ಸಭೆಗೆ ಭಾಗವಹಿಸುವವರಿಗೆ ಸಭಾ ಭತ್ಯೆ ಮತ್ತು ಪ್ರಯಾಣ ಭತ್ಯೆಯನ್ನು ಕೊಡಲಾಗುವುದು. ಇದನ್ನು ಕಾಲಕಾಲಕ್ಕೆ ಕೇಂದ್ರ ಸಮಿತಿ ಸಭೆಯಲ್ಲಿ ನಿಗಧಿಪಡಿಸಲಾಗುವುದು.

ಎ) **ಗೌರವ ಅಧ್ಯಕ್ಷರು :–** ಕೇಂದ್ರ ಸಮಿತಿಯ ಎಲ್ಲಾ ಸಭೆಗಳ ಅಧ್ಯಕ್ಷತೆಯನ್ನು ವಹಿಸುತ್ತಾರೆ ಹಾಗೂ ಹೆಬ್ಬಾರ್ ಶ್ರೀವೈಷ್ಣವ ಸಭಾದ ಎಲ್ಲಾ ಕೆಲಸ ಕಾರ್ಯಗಳ ಮೇಲ್ವಿಚಾರಣೆಯನ್ನು ವಹಿಸುತ್ತಾರೆ ಮತ್ತು ಅಗತ್ಯಕ್ಕೆ ತಕ್ಕಂತೆ ಆಡಳಿತ ಮಂಡಳಿಯ ಪದಾಧಿಕಾರಿಗಳಿಗೆ ಜವಾಬ್ದಾರಿಗಳನ್ನು ಹಂಚುವುದು. ಯಾವುದೇ ನಿಯಮಗಳ ವಿಷಯದಲ್ಲಿ ಗೊಂದಲ/ ಸಂದಿಗ್ಧತೆಗಳು ತೋರಿದಲ್ಲಿ ಅದರ ಸರಿಯಾದ ವ್ಯಾಖ್ಯಾನವನ್ನು ಅವರು ನೀಡುತ್ತಾರೆ ಮತ್ತು ಅವರ ನಿರ್ಧಾರವೇ ಅಂತಿಮ ಮತ್ತು ಕಡ್ಡಾಯವಾಗಿರುತ್ತದೆ.

ಏ) **ಗೌರವ ಉಪಾಧ್ಯಕ್ಷರುಗಳು:–** ಇವರು ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅಧ್ಯಕ್ಷರ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅವಶ್ಯಕತೆಗೆ ತಕ್ಕಂತೆ ಅಧ್ಯಕ್ಷರು ಬೇರೆ ಕೆಲಸಗಳನ್ನು ವಹಿಸಬಹುದು.

ಐ) ಗೌರವ ಕಾರ್ಯದರ್ಶಿ (ಬೆಂಗಳೂರು ಉಪಸಭಾಗಳಿಂದ)

1. ಸಭಾ, ಟ್ರಸ್ಟ್, ಕಲ್ಯಾಣ ಮಂಟಪ ಮತ್ತು ಪಾಲಿಟೆಕ್ನಿಕ್‌ಗಳ ಸಂಪೂರ್ಣ ಆಡಳಿತ ಸೇರಿ ಈ ಕೆಳಗೆ ವಿವರಿಸಿರುವ ಜವಾಬ್ದಾರಿಗಳನ್ನು ಸಹ ನಿರ್ವಹಿಸುತ್ತಾರೆ.
2. ಸದಸ್ಯತ್ವ ಮತ್ತು ನೂತನ ಹಾಗೂ ಹಾಲಿ ಸದಸ್ಯರ ವರ್ಗಾವಣೆ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಗಳು.
3. ವಿದ್ಯಾರ್ಥಿ ವೇತನ (ವಾರ್ಷಿಕ) ಸಂಬಂಧಪಟ್ಟ ಜವಾಬ್ದಾರಿಗಳು.
4. ಸಭಾಗೆ ಸೇರಿದ ಎಲ್ಲಾ ಚರ ಮತ್ತು ಸ್ಥಿರ ಆಸ್ತಿಗಳನ್ನು ತಮ್ಮ ಸುಪರ್ದಿಯಲ್ಲಿ ಇಟ್ಟುಕೊಳ್ಳುವುದು.
5. ಎಲ್ಲಾ ಕಾನೂನು ರೀತ್ಯಾ ಜವಾಬ್ದಾರಿಗಳನ್ನು ಪೂರೈಸುವುದು.
6. ಸಭಾದ ಪ್ರತಿನಿಧಿಯಾಗಿ ಸಭಾದ ಎಲ್ಲಾ ಸಂಪನ್ಮೂಲ–ಗಳನ್ನು ಸಂಗ್ರಹಿಸಿ, ರಕ್ಷಿಸಿ ನಿರ್ವಹಿಸುವುದು
7. ಸಭಾದ ಕೇಂದ್ರ ಸಮಿತಿ, ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ವಿಶೇಷ ಸರ್ವ ಸದಸ್ಯರ ಸಭೆಗಳ ನೋಟಿಸುಗಳಿಗೆ ಸಹಿ ಹಾಕುವುದು.
8. ಸಭಾಕ್ಕೆ ಸಂಬಂಧಿಸಿದ ಅಥವಾ ಯಾವುದೇ ರೀತಿಯಲ್ಲಿ ಸಭಾದ ವಿಷಯವಾದ ಪತ್ರವ್ಯವಹಾರಗಳನ್ನು ನೋಡಿಕೊಳ್ಳುವುದು.
9. ಕೇಂದ್ರ ಸಮಿತಿಯಿಂದ ಮಂಜೂರಾದ ಮಿತಿಯಲ್ಲಿ, ಸಭಾದ ಖರ್ಚುವೆಚ್ಚಗಳ ಅನುಮತಿಯ ಸಂಕೇತವಾಗಿ ಹಣ ಬಿಡುಗಡೆ ಪಾವತಿಗೆ ಸಹಿಹಾಕುವುದು.

10. ಮುಂಗಡ ಪತ್ರ ತಯಾರಿಕೆಯಲ್ಲಿ, ವಾರ್ಷಿಕ ಸ್ವೀಕೃತಿ ಮತ್ತು ಪಾವತಿಗಳ ಪಟ್ಟಿಯ ತಯಾರಿಕೆಯಲ್ಲಿ ಮತ್ತು ಅವುಗಳನ್ನು ಲೆಕ್ಕ ಪರಿಶೋಧಕರಿಂದ ತನಿಖೆ ಮಾಡಿಸಿ, ಕೇಂದ್ರ ಸಮಿತಿಯ ಅನುಮೋದನೆ ಪಡೆದು ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಹಾಜರುಪಡಿಸುವ ಎಲ್ಲಾ ಕೆಲಸಗಳಲ್ಲಿ ಗೌರವ ಖಜಾಂಚಿಗೆ ನೆರವಾಗುವುದು.

11. ದಿನವಹಿ ನಗದು ವ್ಯವಹಾರಗಳನ್ನು ಪರಿಶೀಲಿಸಿ ಅವುಗಳನ್ನು ಪ್ರಮಾಣೀಕರಿಸುವುದು.

12. ಸಭಾದ ನಿರ್ವಹಣೆಗೆ ಸಂಬಂಧಿಸಿದಂತೆ ಎಲ್ಲಾ ಪತ್ರ ವ್ಯಹಾರಗಳನ್ನು ನೋಡಿಕೊಳ್ಳುವುದು.

13. ಸಭಾಕ್ಕೆ ಸೇರಿದ ಎಲ್ಲಾ ದಾಖಲೆಗಳನ್ನು ಕಾಗದ ಪತ್ರಗಳನ್ನೂ ಸಹ ಸರಿಯಾದ ಕ್ರಮದಲ್ಲಿ ಇರಿಸುವುದು ಮತ್ತು ಇರಿಸುವಂತೆ ನೋಡಿಕೊಳ್ಳುವುದು.

14. ಖಜಾಂಚಿಯೊಡನೆ ಎಲ್ಲಾ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವುದು ಮತ್ತು ವ್ಯವಹರಿಸುವುದು.

15. ದೇವಸ್ಥಾನದ ನಗದು, ಬೆಳ್ಳಿ, ಚಿನ್ನ, ವಿಗ್ರಹಗಳ ಉಸ್ತುವಾರಿ ಮತ್ತು ವಿಮೆ ಬಗ್ಗೆ ಆಗಾಗ್ಗೆ ತಪಾಸಣೆ ಮಾಡುವುದು.

16. ಉಪಸಮಿತಿಗಳಿಂದ ವರದಿಗಳನ್ನು ಸ್ವೀಕರಿಸಿ ಅವುಗಳನ್ನು ಕೇಂದ್ರ ಸಮಿತಿಯ ನಿರ್ಧಾರಕ್ಕೆ ಮಂಡಿಸುವುದು.

17. ಕೇಂದ್ರ ಸಮಿತಿ ಸಭೆಗಳಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರುವುದು ಮತ್ತು ಅಂತಹ ಜಾರಿಗೊಳಿಸಲಾದ ನಿರ್ಧಾರಗಳ ವರದಿಯನ್ನು ಕೇಂದ್ರ ಸಮಿತಿಗೆ ಅದರ ಮುಂದಿನ ಸಭೆಯಲ್ಲಿ ಒಪ್ಪಿಸುವುದು.

18. ಉಪಸಮಿತಿಗಳ ಸಂಚಾಲಕರು / ಉಪಸಭಾಪತಿಗಳು ಕೇಂದ್ರ ಸಮಿತಿಯ ಯಾರಾದರೊಬ್ಬರು ಆಗಿರುತ್ತಾರೆ.

ಎಲ್ಲಾ ಉಪಸಮಿತಿಗಳ ಸಭೆಗೂ ಅಧ್ಯಕ್ಷರು ಮತ್ತು ಕಾರ್ಯದರ್ಶಿರವರು ಖಾಯಂ ಆಹ್ವಾನಿತರಾಗಿರುತ್ತಾರೆ.

19. **ಹಣಕಾಸಿನ ಅಧಿಕಾರಗಳು :–** ಅನಿರೀಕ್ಷಿತ ಸಂದರ್ಭಗಳಲ್ಲಿ, ಅಧ್ಯಕ್ಷರು, ಕಾರ್ಯದರ್ಶಿ, ಪದಾಧಿಕಾರಿಗಳು ಮತ್ತು ಕೇಂದ್ರ ಸಮಿತಿಯ ಪ್ರತಿ ವ್ಯವಹಾರಕ್ಕೆ ಈ ಕೆಳಗಿನ ಮಿತಿಗೆ ಒಳಪಟ್ಟು ಅಧಿಕಾರವನ್ನು ಹೊಂದಿರುತ್ತಾರೆ.

ಅ) ಅಧ್ಯಕ್ಷರು ಗರಿಷ್ಠ 50,000/– ರೂಗಳು

ಆ) ಕಾರ್ಯದರ್ಶಿ ಗರಿಷ್ಠ 25,000/– ರೂಗಳು

ಇ) ಆಡಳಿತ ಮಂಡಳಿ ಬಹುಮತದೊಂದಿಗೆ 1,00,000/– ರೂಗಳು

ಈ) ಕೇಂದ್ರ ಸಮಿತಿಯು ಬಹುಮತದೊಂದಿಗೆ 10,00,000/– ರೂಗಳು. ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಹಣಕಾಸು ಮಿತಿಯ ಖರ್ಚುಗಳು ಆಡಳಿತ ಮಂಡಳಿ ಒಪ್ಪಿಗೆ ಪಡೆದಲ್ಲಿ ಮಾತ್ರ ಸಿಂಧುವಾಗಿರುತ್ತದೆ.

**ತಿಳುವಳಿಕೆ :–**

ಕೆಲವು ಜವಾಬ್ದಾರಿಗಳು ಯಾವುದೇ ಇತರ ಕೆಲಸ ಕಾರ್ಯಗಳನ್ನು ಸಂದರ್ಭ ಮತ್ತು ಸಮಯಕ್ಕೆ ಅನುಸಾರವಾಗಿ ಸಭಾದ ಹಿತ ದೃಷ್ಟಿಯಿಂದ ಅಗತ್ಯಬಿದ್ದಲ್ಲಿ ಜಂಟಿ ಕಾರ್ಯದರ್ಶಿ (ಬೆಂಗಳೂರು ಹೊರಗಿನಿಂದ) ಮತ್ತು ಗೌರವ ಮಹಿಳಾ ಜಂಟಿ ಕಾರ್ಯದರ್ಶಿಗಳಿಗೆ ಅಧ್ಯಕ್ಷರು ವಿಂಗಡನೆ (ಹಂಚಿಕೆ) ಮಾಡಬಹುದು.

**ಗೌರವ ಖಜಾಂಚಿ :–**

ಗೌರವ ಖಜಾಂಚಿಯು ಕೇಂದ್ರ ಸಮಿತಿಯ ಸಾಮಾನ್ಯ ಮೇಲ್ವಿಚಾರಣೆಯೊಂದಿಗೆ ಅಧ್ಯಕ್ಷರ ಉಸ್ತುವಾರಿಯಲ್ಲಿ ಜವಾಬ್ದಾರಿ ನಿರ್ವಹಿಸುವುದು.

ವಾರ್ಷಿಕ ಮುಂಗಡ ಪತ್ರವನ್ನು ಗೌ॥ ಕಾರ್ಯದರ್ಶಿಯವರೊಡನೆ ಚರ್ಚಿಸಿ ತಯಾರಿಸಿ ಇದನ್ನು ಕೇಂದ್ರ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು.

ಸಭಾದ ಎಲ್ಲ ಹಣಕಾಸಿನ ಮೇಲುಸ್ತುವಾರಿಯನ್ನು ವಹಿಸುತ್ತಾರೆ ಮತ್ತು ಕೇಂದ್ರ ಸಮಿತಿಯ ನಿರ್ಧಾರದ ಪ್ರಕಾರವೇ ಸಭಾದ ಹಣವನ್ನು ತೊಡಗಿಸುವುದು ಹಾಗೂ ವಿನಿಯೋಗಿಸುವುದು ಗೌ॥ ಖಜಾಂಚಿ ಮತ್ತು ಗೌ॥ ಕಾರ್ಯದರ್ಶಿರವರ ಜವಾಬ್ದಾರಿ–ಯಾಗಿರುತ್ತದೆ. ಪ್ರತಿ ತಿಂಗಳು ಲೆಕ್ಕ ಪರಿಶೋಧಕರಿಂದ ಪರಿಶೀಲಿಸಲ್ಪಟ್ಟ ಲೆಕ್ಕದ ತಪಶೀಲನೆಯನ್ನು ಕೇಂದ್ರ ಸಮಿತಿ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯುವುದು. ವಾರ್ಷಿಕ ಆಯವ್ಯಯ ಪಟ್ಟಿಯನ್ನು ಸಂಘಗಳ ನೋಂದಣಾಧಿಕಾರಿಗಳಿಗೆ ಮತ್ತು ವರಮಾನ ತೆರಿಗೆ ಕಛೇರಿಗೆ ಸಲ್ಲಿಸಲು ಲೆಕ್ಕ ಪರಿಶೋಧಕರ ಜೊತೆ ಸಹಕರಿಸುವುದು.

**ಸಮಿತಿಯ ಲೆಕ್ಕ ಪರಿಶೋಧಕರು:–**

ಸಮಿತಿಯ ಲೆಕ್ಕ ಪರಿಶೋಧಕರು, ಸಭೆಯ ಹಣಪಾವತಿ ದಾಖಲೆಗಳನ್ನು (ವೋಚರ್ಸ್) ಮೂಲ ಪುಸ್ತಕಗಳೊಂದಿಗೆ ಹೋಲಿಸಿ (ತಾಳೆ ಮಾಡಿ) ಪುಸ್ತಕದಲ್ಲಿ ತೋರಿಸಿರುವ ಬಾಕಿ ಹಣವನ್ನು ನಿಯಮಿತ ಕಾಲಾವಧಿಯಲ್ಲಿ ಪರಿಶೀಲಿಸಿ ಸಭಾದ ಮತ್ತು ಉಪಸಭಾದ ಲೆಕ್ಕ ಪುಸ್ತಕಗಳು ದಿನದಿನವು ದಾಖಲಿಸಿದೆ ಎಂಬುವುದನ್ನು ಖಾತರಿಗೊಳಿಸತಕ್ಕದ್ದು.

**ಉಪಸಭಾಗಳ ಲೆಕ್ಕಪತ್ರಗಳು:–**

ಎಲ್ಲಾ ಉಪಸಭಾಗಳು ಪ್ರತಿ ವರ್ಷವೂ ತಮ್ಮ ಘಟಕಗಳ ವಾರ್ಷಿಕ ಸಭೆಯನ್ನು ಜುಲೈ 31 ರೊಳಗೆ ನಡೆಸಿ ಸಭೆಯಲ್ಲಿ ಲೆಕ್ಕ ಪತ್ರಗಳನ್ನು ಅನುಮೋದಿಸಿಕೊಂಡು ಕೇಂದ್ರ ಸಭಾಗೆ ಕಳುಹಿಸತಕ್ಕದ್ದು. ಇತರೆ ಆದಾಯ ಮೂಲಗಳನ್ನು ಹೊಂದಿರುವ ಉಪಸಭಾಗಳು ತಮ್ಮ ಮಾಸಿಕ ಲೆಕ್ಕಪತ್ರಗಳನ್ನು ಪ್ರಧಾನ ಸಭೆಗೆ ಕಳುಹಿಸತಕ್ಕದ್ದು. ಈ ಉಪಸಭಾಗಳು ತಮ್ಮ ಸಭೆಗಳಲ್ಲಿ ಮಂಡಿಸುವ ಮೊದಲು ತಮ್ಮ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನೆ ನಡೆಸತಕ್ಕದ್ದು. ಎಲ್ಲಾ ಲೆಕ್ಕ ಪತ್ರಗಳನ್ನೂ ಸಹ ಪ್ರಧಾನ ಕಚೇರಿಯಲ್ಲಿ ಪರಿಶೀಲಿಸಿ

ಅಗತ್ಯವಾದ ವಿವರಣೆಗಳನ್ನು ಕೇಳಲಾಗುವುದು. ಆಯಾ ವರ್ಷದ ಲೆಕ್ಕ ಪತ್ರಗಳು ಮುಂದಿನ ವರ್ಷದ ಜುಲೈ 31 ರೊಳಗೆ ಮುಖ್ಯ ಕಚೇರಿಯನ್ನು ತಲುಪಬೇಕು. ಉಪಸಭಾದ ಎಲ್ಲಾ ಬ್ಯಾಂಕ್ ವ್ಯವಹಾರಗಳು, ಉಳಿತಾಯ ಖಾತೆ, ಚಾಲ್ತಿ ಖಾತೆ, ನಿಗಧಿತ ಠೇವಣಿಗಳನ್ನು ಮತ್ತು ಸಾಲದ ವ್ಯವಹಾರಗಳನ್ನು ಸಾಮಾನ್ಯವಾಗಿ ಕಾರ್ಯದರ್ಶಿ ಮತ್ತು ಖಜಾಂಚಿಗಳು ಜಂಟಿಯಾಗಿ ನಡೆಸುವವರಾದರು ಸಹ ತುರ್ತು ಪರಿಸ್ಥಿತಿಯಲ್ಲಿ ಉಪಸಭಾದ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಖಜಾಂಚಿಗಳಲ್ಲಿ ಯಾರಾದರು ಇಬ್ಬರು ಬ್ಯಾಂಕ್ ಖಾತೆಗಳನ್ನು ನಿರ್ವಹಿಸಬಹುದು.

**21. ಸರ್ವ ಸದಸ್ಯರ ಸಭೆ:–**

ಪ್ರಸಕ್ತ ನಿಯಮಗಳ ಅನುಸಾರ, ಪ್ರತಿವರ್ಷವೂ ಸರ್ವಸದಸ್ಯರ ಸಭೆಯನ್ನು ಸೆಪ್ಟೆಂಬರ್ 30ರ ಒಳಗೆ ನಡೆಸಬೇಕು ಆದರೆ ತುರ್ತು ಸಂದರ್ಭಗಳಲ್ಲಿ ಇದನ್ನು ಕೇಂದ್ರ ಸಮಿತಿಯ ಅನುಮೋದನೆ–ಯೊಂದಿಗೆ ಮುಂದೂಡಬಹುದು. ಆಡಿಟ್ ಆದ ಲೆಕ್ಕ ಪತ್ರಗಳ ವರದಿಯನ್ನು ಸರ್ವ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದು ನೋಂದಣಾಧಿಕಾರಿಗಳಿಗೆ ಸಲ್ಲಿಸಬಹುದು.

**22. ಸರ್ವಸದಸ್ಯರ ಸಭೆಗೆ ಕನಿಷ್ಟ ಹಾಜರಾತಿ :**

ಒಟ್ಟು ನೋಂದಾಯಿತ ಸದಸ್ಯರ ಸಂಖ್ಯೆಯಲ್ಲಿ ಹತ್ತನೆ ಒಂದು ಭಾಗ ವಾಸ್ತವವಾಗಿ ಹಾಜರಿರುವ ಅಥವಾ ಕನಿಷ್ಠ 50 ಸದಸ್ಯರು ಯಾವುದು ಕಡಿಮೆಯೋ ಅದು.

**23. ಸಾಮಾನ್ಯ ಸರ್ವ ಸದಸ್ಯರ ಸಭೆಯಲ್ಲಿ:**

ನಿಗದಿತ ಪ್ರಾರಂಭದ ಸಮಯದಿಂದ ಅರ್ಧ ತಾಸಿನ ಒಳಗೆ ಕೋರಮ್ ಲಭ್ಯವಿಲ್ಲದಿದ್ದರೆ, ಅಂತಹ ಸಭೆಯನ್ನು ಮುಂದೆ ಹಾಕಿ, ಮುಂದೆ ಹಾಕಿದ ಸಭೆಯನ್ನು ಕನಿಷ್ಠ ಹಾಜರಾತಿ ಇರಲಿ, ಇಲ್ಲದಿರಲಿ ನಡೆಸತಕ್ಕದ್ದು.

24. ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನ್ನು ಗುರುತಿನ ಚೀಟಿಯನ್ನು ಪಡೆದಿರುವ ಸದಸ್ಯರಿಗೆ ಮಾತ್ರ ಅವರ ನೋಂದಾಯಿತ ವಿಳಾಸಕ್ಕೆ ಕಳುಹಿಸತಕ್ಕದ್ದು. ಸಭೆ ನಡೆಯಲಿರುವ ನಿಗದಿತ ದಿನಾಂಕಕ್ಕೆ 21 ದಿನಗಳ ಮುಂಚೆ ಅಂಚೆಯ ಮೂಲಕ ಅಥವಾ ಕೊರಿಯರ್

ಮೂಲಕ ಕಳುಹಿಸತಕ್ಕದ್ದು. ಇ–ಮೇಲ್ ಅಥವಾ ಖುದ್ದಾಗಿ ರವಾನಿಸಿ (ಸ್ವೀಕೃತಿ ಪಡೆದು) ಮತ್ತು ದಿನಪತ್ರಿಕೆಯಲ್ಲಿ ಹಾಕಿಸಬಹುದು.

25. ಸಭೆಯ ಮತ್ತು ಅದರ ಧ್ಯೇಯಗಳ ವಿಷಯದಲ್ಲಿ ಯಾವುದೇ ನಿರ್ಣಯವನ್ನು ಮಂಡಿಸಲಿಚ್ಚಿಸುವ ಸದಸ್ಯರು ಅದನ್ನು ಲಿಖಿತ ರೂಪದಲ್ಲಿ ಕಾರ್ಯದರ್ಶಿಯವರಿಗೆ ಸಭೆಗೆ ನಿಗದಿಯಾದ ದಿನಾಂಕಕ್ಕಿಂತ 15 ದಿವಸಗಳ ಮುಂಚೆ ತಲುಪಿಸತಕ್ಕದ್ದು.

26. ಸಾಧಾರಣ ಸರ್ವ ಸದಸ್ಯರ ಸಭೆಯ ನೋಟಿಸಿನಲ್ಲಿ ಇತರ ವಿಷಯಗಳೊಡನೆ ಈ ಕೆಳಗಿನ ಅಂಶಗಳು ಸೇರ್ಪಟ್ಟಿರಬೇಕು:–

ಅ) ಸಭೆ ನಡೆಯುವ ದಿನಾಂಕ, ಕಾಲ ಮತ್ತು ಸ್ಥಳ

ಆ) ಸರ್ವ ಸದಸ್ಯರ ಸಭೆಯ ದಿನಾಂಕಕ್ಕಿಂತ ಹಿಂದಿನ ಮಾರ್ಚ್ 31ಕ್ಕೆ ಕೊನೆಗೊಳ್ಳುವ ವರ್ಷದ ಕೇಂದ್ರ ಸಮಿತಿಯ ವಾರ್ಷಿಕ ವರದಿ.

ಇ) ಆದಾಯ ವೆಚ್ಚಗಳ ತಪಶೀಲು, ಆಯವ್ಯಯದ ಪಟ್ಟಿ ಮತ್ತು ಲೆಕ್ಕ ಪರಿಶೋಧಕರ ವರದಿಯನ್ನು ಸಭೆಯಲ್ಲಿ ಚರ್ಚೆ ಮತ್ತು ಅನುಮೋದನೆಗಾಗಿ ಮಂಡಿಸತಕ್ಕದ್ದು.

ಈ) ಮುಂದಿನ ವರ್ಷದ ಮುಂಗಡ ಅಂದಾಜು ಆಯವ್ಯಯ ಪಟ್ಟಿಯ ಮಂಡನೆ.

ಉ) ಲೆಕ್ಕ ಪರಿಶೋಧಕರ ನೇಮಕಕ್ಕೆ ಸೂಚನೆ.

ಪ್ರತಿಯೊಂದು ಸರ್ವಸದಸ್ಯರ ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರೇ ವಹಿಸತಕ್ಕದ್ದು. ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಅಧಕ್ಷತೆಯನ್ನು ವಹಿಸಬೇಕು. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇಬ್ಬರು ಗೈರುಹಾಜರಾಗಿದ್ದರೆ, ಸದಸ್ಯರಿಂದ ಬಹುಮತದಿಂದ ಚುನಾಯಿಸಲ್ಪಟ್ಟ ಸದಸ್ಯರೊಬ್ಬರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಬೇಕು.

27. **ವಿಶೇಷ ಸರ್ವ ಸದಸ್ಯರ ಸಭೆ:–**

ವಿಶೇಷ / ಸಾಮಾನ್ಯ ಸರ್ವ ಸದಸ್ಯರ ಸಭೆಗಳಿಗೆ ಹಾಜರಾಗುವ ಎಲ್ಲಾ ಸದಸ್ಯರುಗಳಿಗೆ ಕೇಂದ್ರ ಆಡಳಿತ ಮಂಡಳಿಯಿಂದ ಕಾಲ ಕಾಲಕ್ಕೆ ನಿಗದಿಪಡಿಸಿದ ಸಾಮಾನ್ಯ ಪ್ರಯಾಣ ಭತ್ಯೆಯನ್ನು ಪಾವತಿಸುವುದು. ಸಭಾದ ಅಧಿನಿಯಮಗಳ ತಿದ್ದುಪಡಿಯಲ್ಲದೆ

ಇತರ ವಿಷಯಗಳಿಗಾಗಿ ಕರೆದ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ನಿಗಧಿತ ಸಮಯದಿಂದ ಅರ್ಧತಾಸಿನ ಒಳಗೆ ಕನಿಷ್ಠ ಹಾಜರಿ (ಕೋರಮ್) ಲಭ್ಯವಿಲ್ಲದಿದ್ದರೆ ಅಂತಹ ಸಭೆಯನ್ನು ಕೇಂದ್ರ ಸಮಿತಿಯ ನಿರ್ಧಾರಕ್ಕೆ ಅನುಸಾರವಾಗಿ ಮುಂದೂಡಬೇಕು ಮತ್ತು ಅಂತಹ ಮುಂದೂಡಲ್ಪಟ್ಟ ಸಭೆಗೆ ಕೋರಮ್ ಅಗತ್ಯವಿರುವುದಿಲ್ಲ. ಉಪನಿಯಮಗಳಲ್ಲಿ ತಿದ್ದುಪಡಿ ಮಾಡಬೇಕಾಗಿರುವ ವಿಷಯಗಳನ್ನು ಮುಂಚಿತವಾಗಿ ಎಲ್ಲಾ ಸದಸ್ಯರುಗಳಿಗೂ ವಿಶೇಷ ಸರ್ವ ಸದಸ್ಯರ ಸಭೆಯ 21 ದಿನಗಳ ಮುಂಚಿತವಾಗಿ ಸೂಚನಾ ಪತ್ರದೊಂದಿಗೆ ಕಳುಹಿಸಬೇಕು.

ಚುನಾವಣೆ / ವಿಶೇಷ / ಸರ್ವ ಸದಸ್ಯರ ಸಭೆಗೆ 3 ತಿಂಗಳು ಮುಂಚಿತವಾಗಿ ಹೊಸ ಸದಸ್ಯತ್ವ ಮತ್ತು ಸದಸ್ಯತ್ವದ ವರ್ಗಾವಣೆ ಕೊಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗುವುದು.

28. ಸರ್ವ ಸದಸ್ಯರ ಸಭೆಯಲ್ಲಿ / ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಅಥವಾ ಮಾಸಿಕ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಬಹುಮತದಿಂದ ತೀರ್ಮಾನಿಸತಕ್ಕದ್ದು. ಮತಗಳು ಸಮಾನ–ವಾಗಿದ್ದಲ್ಲಿ, ಅಧ್ಯಕ್ಷರು, ಅವರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಅಥವಾ ಅಧ್ಯಕ್ಷತೆ ವಹಿಸುವ ಸದಸ್ಯರು ತಮ್ಮ ಮತವನ್ನು ಚಲಾಯಿಸಬೇಕು.

29. ಕೇಂದ್ರ ಸಮಿತಿಗೆ ಮತ್ತು ಉಪಸಭೆಗೆ ಸ್ಪರ್ಧಿಸಬೇಕಾದರೆ ಕೇವಲ ಹೆಬ್ಬಾರ್ ಶ್ರೀವೈಷ್ಣವ ಐಯ್ಯಂಗಾರ್ ಆಗಿರುವ ಸದಸ್ಯರು ತಮ್ಮ ಅರ್ಜಿಯನ್ನು ಉಪಸಭಾದ ಗೌರವ ಕಾರ್ಯದರ್ಶಿಯವರಿಗೆ ಚುನಾವಣಾ ವೇಳಾಪಟ್ಟಿಯು ಘೋಷಿತವಾದ ಮೇಲೆ ಕೊಡತಕ್ಕದ್ದು. ಸದಸ್ಯರು ಕೇಂದ್ರ ಸಮಿತಿಗಾಗಲಿ ಅಥವಾ ಉಪಸಭಾದ ಕಾರ್ಯಕಾರಿ ಸಮಿತಿಗಾಗಲಿ ಸ್ಪರ್ಧಿಸಬೇಕಾದರೆ ಈ ಕೆಳಕಂಡ ನಿಯಮಗಳು ಅನ್ವಯಿಸುತ್ತದೆ.

1. ಸತತ ಎರಡು (2) ಅವಧಿಗೆ ಕೇಂದ್ರ ಸಮಿತಿ ಸದಸ್ಯರಾಗಿದ್ದರೆ ಮತ್ತು ಮೂರನೇ (3) ಅವಧಿಯ ಕೇಂದ್ರ ಸಮಿತಿ ಸ್ಥಾನಕ್ಕಾಗಲಿ ಅಥವಾ ಉಪಸಭಾದ ಕಾರ್ಯಕಾರಿ ಸಮಿತಿ ಸ್ಥಾನಕ್ಕಾಗಲಿ ಸ್ಪರ್ಧಿಸುವಂತಿಲ್ಲ.

2. ಎರಡು (2) ಅವಧಿಗೆ ಉಪಸಭಾದ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರೆ ಮತ್ತೆ ಮೂರನೇ (3) ಅವಧಿಯ ಕೇಂದ್ರ ಸಮಿತಿ ಸ್ಥಾನಕ್ಕಾಗಲಿ ಅಥವಾ ಉಪಸಭಾದ ಕಾರ್ಯಕಾರಿ ಸಮಿತಿ ಸ್ಥಾನಕ್ಕಾಗಲಿ ಸ್ಪರ್ಧಿಸುವಂತಿಲ್ಲ.

3. ಒಂದು ಅವಧಿಗೆ ಕೇಂದ್ರ ಸಮಿತಿ ಸದಸ್ಯರಾಗಿದ್ದು, ಇನ್ನೊಂದು ಅವಧಿಗೆ ಉಪಸಭಾದ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರೆ ಮತ್ತೆ ಮೂರನೇ (3) ಅವಧಿಯ ಉಪಸಭಾದ ಕಾರ್ಯಕಾರಿ ಸಮಿತಿ ಸ್ಥಾನಕ್ಕಾಗಲಿ ಅಥವಾ ಕೇಂದ್ರ ಸಮಿತಿ ಸ್ಥಾನಕ್ಕಾಗಲಿ ಸ್ಪರ್ಧಿಸುವಂತಿಲ್ಲ.

4. ಒಂದು ಅವಧಿ ಎಂದರೆ ಕೇಂದ್ರ ಸಮಿತಿ ಅಥವಾ ಉಪಸಭಾದ ಕಾರ್ಯಕಾರಿ ಸ್ಥಾನ ಖಾಲಿಯಾಗಿದ್ದು ಆ ಸ್ಥಾನಕ್ಕೆ ಉಳಿದ ಅವಧಿಗೆ ಆಯ್ಕೆಯಾಗಿ ಬಂದರು ಸಹ ಅದನ್ನು ಒಂದು ಅವಧಿ ಎಂದು ಪರಿಗಣಿಸಲಾಗುವುದು.

5. ಯಾವುದೇ ಉಪಸಭಾಗಳಲ್ಲಿ ಕಾರ್ಯಕಾರಿ ಸಮಿತಿ ಸ್ಥಾನಕ್ಕೆ 9ಕ್ಕಿಂತ ಕಡಿಮೆ ಸದಸ್ಯರು ಸ್ಪರ್ಧಿಸಿದ್ದರೆ ಅಂತಹ ಸಂದರ್ಭದಲ್ಲಿ ಉಳಿದ ಸ್ಥಾನಗಳಿಗೆ ಎರಡು(2) ಅವಧಿಯನ್ನು ಮುಗಿಸಿರುವ ಸದಸ್ಯರನ್ನು ಕಾರ್ಯಕಾರಿ ಸಮಿತಿಗೆ ಸೇರಿಸಿಕೊಳ್ಳಬಹುದು ಇಂತಹ ಸದಸ್ಯರು ಈ ಅವಧಿಯಲ್ಲಿ ಉಪಸಭಾದ ಹುದ್ದೆಯನ್ನು (ಅಧ್ಯಕ್ಷರು/ ಕಾರ್ಯದರ್ಶಿ/ ಖಜಾಂಚಿ) ಹೊಂದುವಂತಿಲ್ಲ.

ಈ ಮೇಲ್ಕಂಡ ನಿಯಮಗಳ ಪ್ರಕಾರ ಮತ್ತೆ ಸ್ಪರ್ಧಿಸಬೇಕಾದರೆ ಮೂರು (3) ವರ್ಷದ ಅವಧಿಯ ಮಧ್ಯಂತರವನ್ನು ನೀಡಲೇಬೇಕಾಗುತ್ತದೆ.

**30. ಕೇಂದ್ರ ಸಮಿತಿಯ ಅಧಿಕಾರ ಮತ್ತು ಕರ್ತವ್ಯಗಳು:–**

ಅ) ಪ್ರತಿ ಸಾಧಾರಣ ಸರ್ವ ಸದಸ್ಯರ ಸಭೆಯಲ್ಲಿ ಕೇಂದ್ರ ಸಮಿತಿಯ ವಿವಿಧ ಲೆಕ್ಕದ ಖಾತೆಗಳಲ್ಲಿ ವಾಸ್ತವ ಮತ್ತು ನಿರೀಕ್ಷಿತ ಸ್ವೀಕೃತಿ ಮತ್ತು ಪಾವತಿಗಳ ಪಟ್ಟಿಯನ್ನು ಮತ್ತು ಮುಂದಿನ ವರ್ಷಕ್ಕೆ ಉದ್ದೇಶಿತ ಮುಂಗಡ ಪತ್ರವನ್ನು ತಯಾರಿಸಿ ಸಲ್ಲಿಸತಕ್ಕದ್ದು.

ಆ) ಸಾಮಾನ್ಯ ಸರ್ವಸದಸ್ಯರ ಸಭೆಯಲ್ಲಿ ಕಳೆದ ವರ್ಷದಲ್ಲಿ ಸಭಾದ ವ್ಯವಹಾರಗಳ ವರದಿಯೊಂದನ್ನು ತಯಾರಿಸಿ ಸಲ್ಲಿಸತಕ್ಕದ್ದು.

ಇ) ಸಭಾದ ಆಡಳಿತ ವರ್ಷ ಮುಕ್ತಾಯವಾದ ಕೂಡಲೇ ತನ್ನ ಸ್ವೀಕೃತಿ ಮತ್ತು ಪಾವತಿಗಳ ಪರಿಶೋಧನೆಗೆ ಲೆಕ್ಕ ಪರಿಶೋಧಕರಿಗೆ ಅನುಕೂಲ ಮಾಡಿಕೊಡತಕ್ಕದ್ದು.

ಈ) ಕೇಂದ್ರ ಸಮಿತಿಯು ಈ ಕೆಳಗಿನ ವಿಷಯಗಳನ್ನು ವ್ಯವಸ್ಥೆ ಮಾಡತಕ್ಕದ್ದು.

i. ಸಭಾದ ಧ್ಯೇಯ, ಉದ್ದೇಶಗಳನ್ನು ಸಾಧಿಸಲು ಅಗತ್ಯವಾದ ಮತ್ತು ಸೂಕ್ತವಾದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ii. ವಂತಿಗೆಗಳು, ದೇಣಿಗೆಗಳು, ಉಡುಗೊರೆಗಳು, ದತ್ತಿಗಳನ್ನು ಮತ್ತು ಮೃತ್ಯು ಪತ್ರದ ಮೂಲಕ ನೀಡಲ್ಪಟ್ಟ ಸಂಪತ್ತನ್ನು ಸ್ವೀಕರಿಸುವುದು.

iii. ಉಪಸಭಾಗಳನ್ನು ರಚಿಸುವುದು.

iv. ಸಭಾದ ಮೂಲ ಧನ ಮತ್ತು ಧನಸಂಗ್ರಹಗಳನ್ನು ಸುರಕ್ಷಿತವಾಗಿ ತೊಡಗಿಸುವುದು (ಹೂಡುವುದು).

v. ಅಗತ್ಯಕ್ಕೆ ಅನುಸಾರವಾಗಿ ಕೇಂದ್ರ ಸಮಿತಿಯ ಸಭೆಗಳನ್ನು ನಡೆಸುವುದು.

vi. ಕೇಂದ್ರ ಸಮಿತಿಯ ಅಧಿಕಾರಕ್ಕೊಳಪಟ್ಟು ವಿಶೇಷ ಉದ್ದೇಶಗಳಿಗಾಗಿ ಉಪಸಮಿತಿಗಳ ರಚನೆ.

vii. ಚರ ಸ್ಥಿರ ಸ್ವತ್ತುಗಳನ್ನು ಗುತ್ತಿಗೆ ಅಥವಾ ಬಾಡಿಗೆ, ಬಹುಮಾನ ಅಥವಾ ದೇಣಿಗೆಯಾಗಿ ಹೊಂದು–ವುದಕ್ಕಾಗಿ ಕೇಂದ್ರ ಸಮಿತಿಯು ತೀರ್ಮಾನಿಸಿದ ಬೆಲೆ ಮತ್ತು ನಿಬಂಧನೆಗೊಳಪಟ್ಟಿದೆ.

viii. ಕೇಂದ್ರ ಸಮಿತಿಯು ಸೂಕ್ತವೆಂದು ತೀರ್ಮಾನಿಸಿದ ಬೆಲೆ ಮತ್ತು ನಿಬಂಧನೆಗೊಳಪಟ್ಟು ಸಭಾಗೆ ಸೇರಿದ ಸ್ಥಿರಾಸ್ತಿಗಳನ್ನು ಮಾರಾಟ ಅಥವಾ ಗುತ್ತಿಗೆಗೆ ಕೊಡಲು

ಸರ್ವಸದಸ್ಯರ ಸಭೆಯ ಪೂರ್ವಾನುಮತಿ ಅಥವಾ ಅನುಮೋದನೆಯಿಲ್ಲದೆ ಯಾವ ಸ್ಥಿರಾಸ್ತಿಯನ್ನು ಮಾರಲಾಗದು.

ix. ಯಾವುದೇ ಸ್ಥಿರ/ಚರ ಆಸ್ತಿ ಸೇರಿದಂತೆ ಯಾವುದೇ ಆಸ್ತಿಯನ್ನು ಕೊಳ್ಳಲು, ಬಾಡಿಗೆಗೆ ಪಡೆಯಲು ಅಥವಾ ಗುತ್ತಿಗೆಯ ಮೇಲೆ ತೆಗೆದುಕೊಳ್ಳಲು ಸಭಾದ ಉದ್ದೇಶಕ್ಕೆ ಅಗತ್ಯವಾದ ಹಣವನ್ನು ಸಾಲವಾಗಿ ಪಡೆಯುವುದು, ಕಟ್ಟಡ ಅಥವಾ ಇತರೆ ನಿರ್ಮಾಣಗಳಿಗಾಗಿ ಹಣ ಸಾಲ ಪಡೆಯಬಹುದು.

x. ಯಾವುದೇ ಉಪಸಭಾ ಕೇಂದ್ರ ಸಮಿತಿಯ ನಿರ್ದೇಶನವನ್ನು ಉಲ್ಲಂಘಿಸಿದರೆ ಅಥವಾ ಅಧಿನಿಯಮಗಳ ಅನುಸಾರ ಕೆಲಸ ಮಾಡದಿದ್ದರೆ ಅಂತಹ ಉಪಸಭಾವನ್ನು ರದ್ದು ಮಾಡುವ ಅಥವಾ ಮುಖ್ಯ ಸಭಾದಲ್ಲಿ ವಿಲೀನಗೊಳಿಸಿಕೊಳ್ಳುವ ಅಧಿಕಾರವನ್ನು ಕೇಂದ್ರ ಸಮಿತಿಯು ಕಾಯ್ದಿರಿಸಿದೆ. ಅದರೆ ಈ ಕ್ರಮವನ್ನು ಸಹಜ ನ್ಯಾಯದ ನೀತಿಯ ಪ್ರಕಾರ ಕ್ರಮವನ್ನು ಜರುಗಿಸಿ ಕೈಗೊಳ್ಳುವಂತಿಲ್ಲ.

ಉ) ಕೇಂದ್ರ ಸಮಿತಿಯು ನಿರ್ದಿಷ್ಠ ಉದ್ದೇಶದಿಂದ ಅನುಮೋದಿಸಿದ ಠರಾವಿನ / ನಿರ್ಣಯದ ಆಧಾರದ ಮೇಲೆ, ಮುಂಗಡ ಪತ್ರದಲ್ಲಿ ಕಾಯ್ದಿರಿಸಿದ ಮೊತ್ತದ ಶೇ. 10 ರಷ್ಟನ್ನು ಒಂದು ಖಾತೆಯಿಂದ ಇನ್ನೊಂದು ರಾಷ್ಟ್ರೀಕೃತ ಬ್ಯಾಂಕಿನ ಖಾತೆಗೆ, ಅದು ಕೇಂದ್ರ ಸಮಿತಿಯ ಸದಸ್ಯರ ಅಭಿಪ್ರಾಯದಲ್ಲಿ ಸಭೆಗೆ ಲಾಭಕರವಾಗುವಂತಿದ್ದರೆ ವರ್ಗಾಯಿಸಬಹುದು.

ಊ) ಕೇಂದ್ರ ಸಮಿತಿಯು ಸಭಾದ ನಿಯಮಗಳಿಗೆ ಕುಂದುಂಟಾಗ–ದಂತೆ ಉಪಕಾರಕ ನಿಯಮಗಳನ್ನು ರೂಪಿಸಲು ಮತ್ತು ಉಪಕಾರಕ ನಿಯಮಗಳಿಗೆ ತಿದ್ದುಪಡಿ ತರುವ ಅಧಿಕಾರವನ್ನು ಹೊಂದಿದೆ. ಉಪಕಾರಕ ನಿಯಮಗಳು ಮುಖ್ಯ ಸಭಾ ಮತ್ತು ಉಪಸಭಾಗಳಿಗೆ ಅನ್ವಯಿಸುವ ಉಪನಿಯಮಗಳಷ್ಟೆ ಅಧಿಕಾರ ಪ್ರಭಾವ ಮತ್ತು ವ್ಯಾಪ್ತಿಗಳನ್ನು ಹೊಂದಿರುತ್ತವೆ. ಆದರೂ ಸಹ

ಉಪಸ್ಥಿತರಿರುವ ಸರ್ವಸದಸ್ಯರ ಸಭೆಯ ಸದಸ್ಯರು ಮತ್ತು ಬಹುಸಂಖ್ಯೆಯ ಸದಸ್ಯರು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರೆ ಅಥವಾ ತಿದ್ದುಪಡಿಯನ್ನು ಸೂಚಿಸಿದರೆ ಅವುಗಳನ್ನು ಯಥಾ ರೀತಿಯಾಗಿ ಅನುಷ್ಠಾನಕ್ಕೆ ತರಲಾಗುವುದು.

ಖ) ಕೇಂದ್ರ ಸಮಿತಿಯ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ಯಾವುದೇ ನಿರ್ಣಯವನ್ನು ಅನುಮೋದನೆಯಾದ ದಿನಾಂಕದಿಂದ ಅತ್ಯಂತ ತುರ್ತು ವಿಷಯಗಳನ್ನುಳಿದು ಆರು ತಿಂಗಳೊಳಗೆ ತಿದ್ದುಪಡಿ ಮಾಡುವುದಾಗಲಿ ಹಿಂತೆಗೆದುಕೊಳ್ಳುವುದಾಗಲಿ ಮಾಡತಕ್ಕದ್ದಲ್ಲ.

ಯಾವುದೇ ಕೇಂದ್ರ ಸಮಿತಿಯ ಸಭೆಯ ಕಾರ್ಯಸೂಚಿ-ಯಲ್ಲಿರುವ ಎಲ್ಲಾ ಪ್ರಸ್ತಾಪಗಳನ್ನು ಸಭೆಯಲ್ಲಿರುವ ಸದಸ್ಯರಲ್ಲಿ ಬಹುಮತದ ಮೂಲಕ ಅನುಮೋದಿಸಲ್ಪಡಬೇಕು. ಯಾವುದೇ ಸಭೆಯಲ್ಲಿ ಅನುಮೋದಿಸಲ್ಪಟ್ಟ ನಿರ್ಣಯಗಳನ್ನು ಸಭೆಯ ಕಾರ್ಯಕಲಾಪದ ಪುಸ್ತಕದಲ್ಲಿ ಕನ್ನಡ ಅಥವಾ ಆಂಗ್ಲಭಾಷೆಯಲ್ಲಿ ದಾಖಲಿಸಿ, ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರು ಸಹಿ ಮಾಡಬೇಕು. ಕೇಂದ್ರ ಸಮಿತಿಯ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಸಮಗ್ರ ಅನುಷ್ಠಾನಕ್ಕೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಒಟ್ಟಾಗಿ ಜವಾಬ್ದಾರಿ-ಯಾಗುತ್ತಾರೆ. ಕೇಂದ್ರ ಸಮಿತಿಯ ಪ್ರತಿಯೊಂದು ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮವನ್ನು ಕೇಂದ್ರ ಸಮಿತಿಗೆ ಮುಂದಿನ ಅಥವಾ ನಂತರದ ಸಭೆಯಲ್ಲಿ ವರದಿ ಮಾಡತಕ್ಕದ್ದು.

**31. ಬ್ಯಾಂಕ್ ಖಾತೆಗಳ ನಿರ್ವಹಣೆ:**

ಬ್ಯಾಂಕಿನ ಖಾತೆ ಅಥವಾ ಖಾತೆಗಳು ಸಭಾದ ಹೆಸರಿನಲ್ಲಿರತಕ್ಕದ್ದು. ಸಭಾದ ಪರವಾಗಿ ನೀಡುವ ಎಲ್ಲಾ ಚೆಕ್ಕುಗಳಿಗೆ ಗೌರವ ಖಜಾಂಚಿ ಮತ್ತು ಬೆಂಗಳೂರು ಮೂಲದ ಗೌರವ ಕಾರ್ಯದರ್ಶಿಯವರು ಸಹಿ ಹಾಕತಕ್ಕದ್ದು. ಖಾತೆಗಳಿಂದ ಹಿಂತೆಗೆದ ಮತ್ತು ವಿಲೇವಾರಿ ಮಾಡಿದ ಹಣಕ್ಕೆ ಎಲ್ಲಾ ಸಹಿದಾರರೂ ಸಹ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ

ಜವಾಬ್ದಾರರಾಗಿರುತ್ತಾರೆ ಮತ್ತು ಸಭಾದ ಪರವಾಗಿ ಹಿಂತೆಗೆದ ಎಲ್ಲಾ ಹಣಕ್ಕೂ ನಿಜವಾದ ಹಾಗೂ ಕ್ರಮಬದ್ಧವಾದ ಲೆಕ್ಕವನ್ನು ಬರೆದಿರುವಂತೆ ನೋಡಿಕೊಳ್ಳತಕ್ಕದ್ದು. ಸಾಮಾನ್ಯವಾಗಿ ಮುಖ್ಯ ಸಭಾದ ಬ್ಯಾಂಕ್ ಖಾತೆಗಳನ್ನು ಗೌರವ ಖಜಾಂಚಿ ಮತ್ತು ಬೆಂಗಳೂರು ಮೂಲದ ಗೌರವ ಕಾರ್ಯದರ್ಶಿಯುವರು ಜಂಟಿಯಾಗಿ ನಿರ್ವಹಿಸುತ್ತಾರೆ. ಯಾವುದೇ ಕಾರಣದಿಂದ ಇವರೊಲ್ಲಬ್ಬರು ದೀರ್ಘಕಾಲ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ–ದಿದ್ದರೆ ಅಥವಾ ದೀರ್ಘಕಾಲ ರಜೆಯ ಮೇಲಿದ್ದರೆ ಅಂತಹ ವ್ಯಕ್ತಿಯ ಪಾತ್ರವನ್ನು ಅಧ್ಯಕ್ಷರು ತಾವೇ ನಿರ್ವಹಿಸಬಹುದು ಅಥವಾ ಯಾರಾದರೊಬ್ಬ ಪದಾಧಿಕಾರಿಗೆ ಲಿಖಿತ ರೂಪದಲ್ಲಿ ವಹಿಸಬಹುದು.

32. **ಉಪಸಭಾಗಳನ್ನು ಆರಂಭಿಸಲು ಪಾಲಿಸಬೇಕಾದ ನಿಯಮಗಳು:–** ಕೇಂದ್ರ ಸಮಿತಿಯು, ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ ಕನಿಷ್ಟ 100 ಸದಸ್ಯರು ಮತ್ತು ಬೆಂಗಳೂರು, ಮೈಸೂರು ಮತ್ತು ಇತರ ರಾಜ್ಯ ರಾಜಧಾನಿಗಳಲ್ಲಿ/ಮೆಟ್ರೋ ನಗರಗಳಲ್ಲಿ ಕನಿಷ್ಟ 200 ಸದಸ್ಯರನ್ನುಳ್ಳ ಉಪ ಸಭಾಗಳನ್ನು ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಪ್ರಾರಂಭಿಸಲು ಅಧಿಕಾರವನ್ನು ಹೊಂದಿದೆ. ಪ್ರಸಕ್ತ ಬೆಂಗಳೂರಿನಲ್ಲಿ 7, ಮೈಸೂರಿನಲ್ಲಿ 3, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ತುಮಕೂರು ತಲಾ 1ರಂತೆ ಒಟ್ಟು 14 ಉಪಸಭಾಗಳಿದ್ದು, ಹೊಸ ಉಪಸಭಾಗಳನ್ನು ಪ್ರಾರಂಭಿಸುವುದು ಅಥವಾ ಸದ್ಯದಲ್ಲಿರುವ ಉಪಸಭಾವನ್ನು ಇತರೆ ಉಪಸಭಾದೊಂದಿಗೆ ವಿಲೀನಗೊಳಿ–ಸುವುದನ್ನು ಕೇಂದ್ರ ಸಮಿತಿಯು ಸನ್ನಿವೇಶದ ಅಗತ್ಯಕ್ಕೆ ತಕ್ಕಂತೆ ಕಾಲಕಾಲಕ್ಕೆ ತೀರ್ಮಾನಿಸಬಹುದು.

ಉಪಸಭಾದ ಕಾರ್ಯಕಾರಿ ಸಮಿತಿಯ ಸದಸ್ಯರ ಸಂಖ್ಯೆ ಕನಿಷ್ಠ 9 ಮತ್ತು ಉಪಸಭೆಯ ಒಟ್ಟು ಸಂಖ್ಯೆಯನ್ನು ಆಧರಿಸಿ, ಗರಿಷ್ಠ 11 ಇರಬೇಕು. ಆದರೂ ಸಹ ಉಪಸಭಾದ ಕಾರ್ಯಕಾರಿ ಸಮಿತಿಯ ಅಂತಿಮ ಸಂಖ್ಯೆಯನ್ನು ಕೇಂದ್ರ ಸಮಿತಿಯು ತೀರ್ಮಾನಿಸುತ್ತದೆ. ಉಪಸಭೆಯ ಪದಾಧಿಕಾರಿಗಳು, ಅಧ್ಯಕ್ಷರು, ಉಪಾಧ್ಯಕ್ಷರು (ಐಚ್ಛಿಕ) ಕಾರ್ಯದರ್ಶಿ ಮತ್ತು ಖಜಾಂಚಿಗಳಾಗಿರುತ್ತಾರೆ. ಯಾವುದಾದರೂ ಉಪಸಭಾವನ್ನು ಇತರೆ ಉಪಸಭಾದೊಡನೆ ವಿಲೀನವಾಗಲು

ಇಷ್ಟಪಟ್ಟರೆ ಅಥವಾ ತನ್ನ ಪದಾಧಿಕಾರಿಗಳ ಸಂಖ್ಯೆಯನ್ನು ಕಡಿಮೆಗೊಳಿಸಲು ಬಯಸಿದರೆ, ಆ ವಿಷಯದ ಮೇಲೆ, ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಿ ಕೇಂದ್ರ ಸಮಿತಿಯ ಅನುಮೋದನೆಗಾಗಿ ಕಳುಹಿಸಬೇಕು. ಕಾರ್ಯಕಾರಿ ಸಮಿತಿಯ ಅವಧಿಯು ಕೇಂದ್ರ ಸಮಿತಿಯ ಅವಧಿಯಂತೆ 3 ವರ್ಷವಿರುತ್ತದೆ. ಎಲ್ಲಾ ಉಪಸಭಾಗಳು ತಮ್ಮ ಲೆಕ್ಕ ಪತ್ರಗಳನ್ನು ಅನುಮೋದಿಸಲು ಮತ್ತು ಇತರೆ ಜವಾಬ್ದಾರಿಗಳನ್ನು ನಿರ್ವಹಿಸಲು, ಪ್ರತಿವರ್ಷವು ವಾರ್ಷಿಕ ಸಭೆಯನ್ನು ನಡೆಸತಕ್ಕದ್ದು.

ಒಂದು ಉಪಸಭಾದಿಂದ ಇನ್ನೊಂದು ಉಪಸಭಾಗೆ ಸದಸ್ಯತ್ವದ ವರ್ಗಾವಣೆ ಕೇವಲ ನಿವಾಸದ ಬದಲಾವಣೆಯ ಸಂದರ್ಭದಲ್ಲಿ ಮಾತ್ರ ಮಾಡಬಹುದು. ಅಂತಹ ವರ್ಗಾವಣೆಯ ಅರ್ಜಿಯನ್ನು ನಿವಾಸದ ಬದಲಾವಣೆಯ ಲಿಖಿತ ದಾಖಲೆಯೊಂದಿಗೆ ಸಲ್ಲಿಸಿದರೆ ಕೇಂದ್ರ ಆಡಳಿತ ಮಂಡಳಿ ಒಪ್ಪಿಗೆ ನೀಡಬಹುದು.

ಅಂತಹ ವರ್ಗಾಯಿತ ಸದಸ್ಯರು ಚುನಾವಣೆಗೆ ಸ್ಪರ್ಧಿಸಲು ಅರ್ಹತೆಯನ್ನು ಪಡೆಯಬೇಕಾದರೆ, ಚುನಾವಣೆಯ ಘೋಷಣೆಗೆ ಕನಿಷ್ಟ 3 ತಿಂಗಳು ಮೊದಲು ಅಂತಹ ಉಪಸಭೆಯ ಸದಸ್ಯತ್ವದ ಪಟ್ಟಿಯಲ್ಲಿ ಇರಬೇಕು.

ಉಪಸಭಾಗಳಿಗೆ ನೀಡುವ ಅನುದಾನವನ್ನು ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಕೇಂದ್ರ ಸಮಿತಿ ಸಭೆಯಲ್ಲಿ ನಿಗಧಿಪಡಿಸಲಾಗುತ್ತದೆ.

ಒಟ್ಟು 14 ಉಪಸಭಾಗಳಿದ್ದು ಬೆಂಗಳೂರಿನಲ್ಲಿ ಮಲ್ಲೇಶ್ವರಂ, ರಾಜಾಜಿನಗರ, ವಿಜಯನಗರ, ಜಯನಗರ, ಬಸವನಗುಡಿ, ಬೆಂಗಳೂರು ಗ್ರಾಮಾಂತರ ಉತ್ತರ–ಪೂರ್ವ (ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಸೇರಿರುತ್ತದೆ) ಮತ್ತು ಬೆಂಗಳೂರು ಗ್ರಾಮಾಂತರ ದಕ್ಷಿಣ–ಪಶ್ಚಿಮ (ರಾಮನಗರ ಜಿಲ್ಲೆ ಸೇರಿರುತ್ತದೆ)

ಮೈಸೂರಿನಲ್ಲಿ 3 ಉಪಸಭಾಗಳಿದ್ದು, ಕೆ.ಆರ್.ವನಂ, ಸರಸ್ವತಿಪುರಂ ಮತ್ತು ಮೈಸೂರು ಗ್ರಾಮಾಂತರ (ಮಂಡ್ಯ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆ ಸೇರಿರುತ್ತದೆ)

**ಸೆಂಟ್ರಲ್ ಉಪಸಭಾ** – ಹೊರ ರಾಜ್ಯಗಳಲ್ಲಿ ಹಾಗೂ ಯಾವುದೇ ಉಪಸಭಾ ವ್ಯಾಪ್ತಿಗೆ ಬಾರದ ಜಿಲ್ಲೆಯವರಿಗೆ ಸದಸ್ಯತ್ವವನ್ನು ಕೊಟ್ಟು

ಆ ಸದಸ್ಯರನ್ನು ಸೆಂಟ್ರಲ್ ಉಪಸಭಾಗೆ ಸೇರಿಸಲಾಗಿದೆ. ಅದರಲ್ಲಿ ಹೈದರಾಬಾದ್, ಮುಂಬೈ, ದೆಹಲಿ ಇನ್ನು ಹಲವು ರಾಜ್ಯಗಳನ್ನು ಸೇರಿಸಲಾಗುವುದು.

33. ಅ) ಯಾವುದೇ ಉಪಸಭೆಯ ಹೆಸರಿನಲ್ಲಿರುವಂತಹ ಎಲ್ಲಾ ಸ್ಥಿರಾಸ್ತಿಗಳು ಕೇಂದ್ರ ಸಭಾದ ಆಸ್ತಿಯಾಗಿರುತ್ತವೆ ಮತ್ತು ಕೇಂದ್ರ ಸಭಾದ ಅಧೀನದಲ್ಲಿರುತ್ತವೆ. ಉಪಸಭಾದ ಕಾರ್ಯಕಾರಿ ಸಮಿತಿಯು ಕಾಲಕಾಲಕ್ಕೆ ಕೇಂದ್ರ ಸಮಿತಿಯು ನೀಡುವ ನಿರ್ದೇಶನಗಳು / ಮಾರ್ಗಸೂಚಿಗಳಿಗೆ ಅನುಗುಣವಾಗಿ ಆಸ್ತಿಗಳ ನಿರ್ವಹಣೆಯನ್ನು ಮಾಡುವುದು. ಉಪಸಭಾಗಳಿಗೆ ಅನ್ವಯಿಸುವಂತಹ ಆಸ್ತಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳು ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಕೇಂದ್ರ ಸಮಿತಿಯ ನಿರ್ಧಾರಗಳು ಅಂತಿಮವಾಗಿರುತ್ತದೆ.

ಆ) ಉಪಸಭಾಗಳು ಪ್ರತಿ ವರ್ಷವೂ ಸಹ ಕೇಂದ್ರ ಸಭಾಗೆ ವಾರ್ಷಿಕ ಸ್ವೀಕೃತಿ ಮತ್ತು ಪಾವತಿಗಳ ವರದಿಯನ್ನು ಕಳುಹಿಸತಕ್ಕದ್ದು. ಅದರೊಡನೆ ಪ್ರತಿ ಜುಲೈ 31ರ ಒಳಗೆ ಹಿಂದಿನ ವರ್ಷದ ಚಟುವಟಿಕೆಗಳ ವರದಿಯನ್ನು ಕಳುಹಿಸತಕ್ಕದ್ದು.

ಇ) ಉಪಸಭಾ ತನ್ನ ಸರ್ವ ಸದಸ್ಯರ ಸಭೆಯಲ್ಲಿ ತೆಗೆದುಕೊಂಡ ಎಲ್ಲಾ ನಿರ್ಣಯಗಳಿಗೆ ಮತ್ತು ಕೇಂದ್ರ ಸಮಿತಿಯ ಎಲ್ಲಾ ತೀರ್ಮಾನಗಳಿಗೆ ಬದ್ಧವಾಗಿರುತ್ತದೆ. ಕೇಂದ್ರ ಸಮಿತಿಯು ಅಗತ್ಯವೆನಿಸಿದರೆ, ಚುನಾವಣೆ, ಸದಸ್ಯತ್ವ ಮತ್ತು ಇತರ ಯಾವುದೇ ವಿಷಯದಲ್ಲಿ ಉಪಕಾರಕ ನಿಯಮಗಳನ್ನು ರೂಪಿಸಬಹುದು ಮತ್ತು ಅಂತಹ ಉಪಕಾರಕ ನಿಯಮಗಳು, ಎಲ್ಲ ಉಪಸಭಾಗಳಿಗೂ ಅನ್ವಯಿಸುತ್ತವೆ ಮತ್ತು ಕೇಂದ್ರ ಸಭಾದ ಉಪನಿಯಮಗಳಷ್ಟೆ ಪ್ರಭಾವ, ಅಧಿಕಾರ ಮತ್ತು ವ್ಯಾಪ್ತಿಯನ್ನು ಹೊಂದಿರುತ್ತವೆ.

ಈ) ಎಲ್ಲಾ ಉಪಸಭಾಗಳು ಹೊಸ ಸದಸ್ಯರಿಂದ ಸಂಗ್ರಹಿಸಲ್ಪಟ್ಟ ಸದಸ್ಯತ್ವದ ಹಣವನ್ನು ಕೇಂದ್ರ ಸಮಿತಿಗೆ ಜಮಾ ಮಾಡತಕ್ಕದ್ದು ಮತ್ತು ಸದಸ್ಯತ್ವದ ಅರ್ಜಿಯನ್ನು ಸಂಬಂದಿಸಿದ ಎಲ್ಲಾ

ದಾಖಲೆಯೊಂದಿಗೆ ಕೇಂದ್ರ ಸಮಿತಿಯ ಅನುಮೋದನೆಗೆ ಕಳುಹಿಸತಕ್ಕದ್ದು. ಇದು ಮೂಲ ನಿಧಿಯಾದ್ದರಿಂದ (ಕೋರ್ ಫಂಡ್), ಅದನ್ನು ಕೇಂದ್ರ ಸಭಾದಲ್ಲಿಯೇ ಉಳಿಸಿ–ಕೊಳ್ಳಬೇಕಾಗುತ್ತದೆ.

ಉ) ಹೇಗಾದರೂ ಒಬ್ಬ ವ್ಯಕ್ತಿಗೆ ಒಂದೇ ಹುದ್ದೆ ಎಂಬ ನೀತಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಮತ್ತು ಒಬ್ಬ ವ್ಯಕ್ತಿಯು ಎರಡು ಸ್ಥಾನಗಳನ್ನು ಉದಾ:– ಏಕಕಾಲದಲ್ಲಿ ಪ್ರಧಾನ ಸಭಾ ಮತ್ತು ಉಪ ಸಭಾಗಳಲ್ಲಿ ಕೇಂದ್ರ ಸಮಿತಿಯ ಸದಸ್ಯ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯನಾಗಿರುವುದು ಮತ್ತು ಪದಾಧಿಕಾರಿಯಾಗಿರುವುದು ಆ ವ್ಯಕ್ತಿಯು ಈಗಾಗಲೇ ಒಂದು ಕಡೆ ಕೇಂದ್ರ ಸಮಿತಿ ಸದಸ್ಯ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯ ಮತ್ತು ಪದಾಧಿಕಾರಿಯಾಗಿದ್ದಲ್ಲಿ ಅಂತಹ ವ್ಯಕ್ತಿಯು ಪ್ರಧಾನ (ಕೇಂದ್ರ) ಅಥವಾ ಉಪಸಭಾದಲ್ಲಿ ಇನ್ನೊಂದು ಕೇಂದ್ರ ಸಮಿತಿಯ ಸದಸ್ಯ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಮತ್ತು ಪದಾಧಿಕಾರಿ ಸ್ಥಾನಕ್ಕೆ ಸ್ಪರ್ಧಿಸುವ ಮೊದಲು ತಾನು ಈಗಿರುವ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸತಕ್ಕದ್ದು. ಹೇಗಾದರು ಸಹ ಉಪಸಭಾದ ಎಲ್ಲಾ ಕೇಂದ್ರ ಸಮಿತಿ ಸದಸ್ಯರು ಕೇಂದ್ರ ಸಮಿತಿಯಲ್ಲಿ ತಮ್ಮ ತಮ್ಮ ಉಪಸಭಾಗಳನ್ನು ಪ್ರತಿಪಾದಿಸುವುದರಿಂದ ಕಾರ್ಯಕಾರಿ ಸಮಿತಿಯ ಎಲ್ಲಾ ಸಭೆಗಳಿಗೂ ಮತ್ತು ವಾರ್ಷಿಕ ಸಭೆಗಳಿಗೂ ಶಾಶ್ವತ ಆಹ್ವಾನಿತರಾಗಿದ್ದು ತಮ್ಮ ಉಪಸಭೆಯ ಎಲ್ಲಾ ಸಭೆಗಳಲ್ಲಿಯು ಕಾರ್ಯಕಾರಿ ಸಮಿತಿಯ ಸದಸ್ಯರ ಎಲ್ಲಾ ಹಕ್ಕುಗಳನ್ನು ಹೊಂದಿರುತ್ತಾರೆ.

34. ಉಪಸಭಾದಲ್ಲಿರುವ ಧನಸಂಗ್ರಹವನ್ನು ತನ್ನ ಸಾಮಾನ್ಯ ಕೆಲಸ ಕಾರ್ಯಗಳಿಗೆ ಮತ್ತು ನಿಯಮ 18 ರಲ್ಲಿ ವಿವರಿಸಿರುವ ಉದ್ದೇಶಗಳಿಗೆ ಬಳಸಿಕೊಳ್ಳಬಹುದು. ಸಭಾದ ಕೇಂದ್ರ ಸಮಿತಿಯು ತನ್ನ ವಿವೇಚನೆಯಿಂದ ಮತ್ತು ಅಗತ್ಯವಾದರೆ ಅಂತಹ ಉದ್ದೇಶಗಳಿಗೆ ಧನಸಹಾಯ ಮಾಡಬಹುದು.

35. ಅಧಿನಿಯಮಗಳ ಉಲ್ಲಂಘನೆಯಾದಲ್ಲಿ ಮತ್ತು ವ್ಯತ್ಯಾಸಗಳಾದಲ್ಲಿ ಕೇಂದ್ರ ಸಮಿತಿಯ ನಿರ್ಣಯವೇ ಅಂತಿಮ ಮತ್ತು ಉಪಸಭಾಕ್ಕೆ ಕಡ್ಡಾಯವಾಗಿ ಅನ್ವಯಿಸತಕ್ಕದ್ದು.

36. ಯಾವುದೇ ಉಪಸಭಾಕ್ಕೂ ತನ್ನ ಉಪಸಭಾವನ್ನು ಅಥವಾ ಕೇಂದ್ರ ಸಭಾವನ್ನು ಆರ್ಥಿಕ ಋಣಕ್ಕೆ ಸಿಲುಕಿಸುವ ಅಧಿಕಾರವಿಲ್ಲ. ಕೇವಲ ಕೇಂದ್ರ ಸಭಾ ಮಾತ್ರ ಎಲ್ಲಾ ಆರ್ಥಿಕ ಜವಾಬ್ದಾರಿಗಳನ್ನು ವ್ಯವಹರಿಸತಕ್ಕದ್ದು.

37. ಅ) ಸಭಾ ಮತ್ತು ಉಪಸಭಾಗಳು ತಮ್ಮ ಸದಸ್ಯರ ಉಪಯೋಗಕ್ಕಾಗಿ ಗ್ರಂಥಾಲಯಗಳನ್ನು ಮತ್ತು ವಾಚನಾಲಯಗಳನ್ನು ನಡೆಸಬಹುದು ಮತ್ತು ಅವುಗಳನ್ನು ಬಳಸುವ ಸದಸ್ಯರಿಂದ ಶುಲ್ಕವನ್ನು ವಸೂಲಿ ಮಾಡಬಹುದು.

ಆ) ಸಭಾದ ಪರವಾಗಿ ಅಥವಾ ಅದರ ವಿರುದ್ಧವಾಗಿ ಕಾನೂನು ಕಟ್ಟಳೆಗಳು ಸಭಾದ ಅಧ್ಯಕ್ಷರ ಹೆಸರಿನಲ್ಲಿರಬೇಕು ಮತ್ತು ಅಧ್ಯಕ್ಷರಿಂದ ಪ್ರತಿನಿಧಿಸಲ್ಪಡಬೇಕು.

ಇ) ಅಧಿನಿಯಮಗಳಲ್ಲಿ ಪ್ರಸ್ತಾಪಿಸದಿರುವ ಅಥವಾ ಅವಕಾಶ ಒದಗಿಸಿಲ್ಲದ ಸನ್ನಿವೇಶಗಳಲ್ಲಿ ಕರ್ನಾಟಕ ಸೊಸೈಟಿಗಳ ನೋಂದಾವಣೆ ಕಾಯಿದೆ 1960 ಮತ್ತು ಅದರಲ್ಲಿ ಅಡಕವಾಗಿರುವ ನಿಯಮಗಳು ಅನ್ವಯಿಸುತ್ತವೆ.

38. **ಚುನಾವಣೆಯಲ್ಲಿ ಎರಡು ವಿಧಾನಗಳಿರುತ್ತವೆ**

ಅ) ಉಪಸಭಾದ ಚುನಾವಣೆಗಳಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಮತ್ತು ಕೇಂದ್ರ ಸಮಿತಿಯಲ್ಲಿ ಉಪಸಭಾವನ್ನು ಪ್ರತಿನಿಧಿಸಲು ಇಬ್ಬರು ಸದಸ್ಯರನ್ನು ಆರಿಸಲು ಚುನಾವಣೆಗಳನ್ನು ನಡೆಸಲಾಗುತ್ತದೆ.

ಆ) ಉಪಸಭಾಗಳು ತಮ್ಮ ಪ್ರಥಮ ಸಭೆಯಲ್ಲಿ ಪದಾಧಿಕಾರಿ–ಗಳನ್ನು ಸರ್ವಾನುಮತದಿಂದ ಆರಿಸಲು ವಿಫಲವಾದರೆ, ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಗುಪ್ತ ಮತದಾನದ ಪದ್ಧತಿ ಪ್ರಕಾರ ನಡೆಸಲಾಗುತ್ತದೆ.

ಮೇಲಿನ (ಅ) ಮತ್ತು (ಆ) ಎರಡೂ ರೀತಿಯ ಚುನಾವಣೆಗಳನ್ನು ಯಾವುದೇ ಗೊಂದಲವಿಲ್ಲದೆ ನಡೆಸಲು ಸ್ಪಷ್ಟವಾದ ಚುನಾವಣಾ ಮಾರ್ಗದರ್ಶಿ ಸೂತ್ರಗಳಿರುವುದು ಅಗತ್ಯ.

**ಚುನಾವಣಾ ನಿಯಮಗಳು : –**

ಉಪಸಭಾಗಳಿಗೆ ಅನ್ವಯಿಸುವಂತೆ ಉಪಸಭಾಗಾಗಲೀ ಅಥವಾ ಕೇಂದ್ರ ಸಭಾಗಾಗಲೀ ಎಲ್ಲ ಚುನಾವಣೆಗಳನ್ನು ನಡೆಸಲು ಪ್ರಧಾನ ಸಭಾದ ಕಾರ್ಯದರ್ಶಿಯವರು (ಬೆಂಗಳೂರು ಉಪಸಭಾದಿಂದ) ಮುಖ್ಯ ಚುನಾವಣಾ ಅಧಿಕಾರಿಗಳಾಗಿ ಕೆಲಸ ನಿರ್ವಹಿಸುವರು. ಅಗತ್ಯವಿದ್ದಲ್ಲಿ ಅವರು ಚುನಾವಣೆ ಪ್ರಕ್ರಿಯೆಯನ್ನು ನಿರ್ವಹಿಸಲು ಚುನಾವಣಾ ಅಧಿಕಾರಿಗಳನ್ನು ನೇಮಿಸಿಕೊಳ್ಳಬಹುದು. ಕಾರಣಾಂತರದಿಂದ ಕಾರ್ಯ–ದರ್ಶಿರವರು ಮುಖ್ಯ ಚುನಾವಣಾಧಿಕಾರಿಯಾಗಿ ಚುನಾವಣೆಯನ್ನು ನಡೆಸಲು ಸಾಧ್ಯವಾಗದಿದ್ದರೆ ಅಧ್ಯಕ್ಷರು ಮುಖ್ಯ ಚುನಾಣಾಧಿಕಾರಿಗಳ ಹುದ್ದೆಯನ್ನು ಬೇರೆಯವರಿಗೆ ವಹಿಸತಕ್ಕದು (ಮುಖ್ಯ ಚುನಾವಣಾ ಅಧಿಕಾರಿ ಸೇರಿದಂತೆ ಎಲ್ಲ ಚುನಾವಣಾ ಅಧಿಕಾರಿಗಳೂ ಸಹ ಪ್ರವಾಸಭತ್ಯೆ / ತುಟ್ಟಿ ಭತ್ಯೆ / ಊಟ ವಸತಿಗಳ ಭತ್ಯಗಳಿಗೆ ಅರ್ಹರಾಗಿರುತ್ತಾರೆ). ಈ ಎಲ್ಲಾ ಚುನಾವಣಾ ಜವಾಬ್ದಾರಿಗಳು ಪ್ರಧಾನ ಸಭಾದ ಅಧ್ಯಕ್ಷರ ಒಟ್ಟಾರೆ ಉಸ್ತುವಾರಿಯಲ್ಲಿ ನಡೆಯುತ್ತದೆ.

ಕಾರಣಾಂತರದಿಂದ ಕಾರ್ಯದರ್ಶಿರವರು ಮುಖ್ಯ ಚುನಾವಣಾಧಿ–ಕಾರಿಯಾಗಿ ಚುನಾವಣೆಯನ್ನು ನಡೆಸಲು ಸಾಧ್ಯವಾಗದಿದ್ದರೆ ಅಧ್ಯಕ್ಷರು ಮುಖ್ಯ ಚುನಾವಣಾಧಿಕಾರಿಗಳ ಹುದ್ದೆಯನ್ನು ಬೇರೆಯವರಿಗೆ ವಹಿಸತಕ್ಕದ್ದು. ಚುನಾವಣೆಗೆ 3 ತಿಂಗಳು ಮುಂಚಿತವಾಗಿ ಹೊಸ ಸದಸ್ಯತ್ವ ಮತ್ತು ಸದಸ್ಯತ್ವದ ವರ್ಗಾವಣೆ ಕೊಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗುವುದು.

1. ಪ್ರತಿಯೊಂದು ಉಪಸಭಾದಲ್ಲಿ ಪ್ರತಿ ಮೂರು ವರ್ಷಗಳಿಗೊಮ್ಮೆ ಮತ್ತು ಮುಂದಿನ ಆರು ತಿಂಗಳುಗಳೊಳಗೆ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಮತ್ತು ಕೇಂದ್ರ ಸಮಿತಿಯಲ್ಲಿ ಉಪಸಭಾವನ್ನು ಪ್ರತಿನಿಧಿಸಲು ಇಬ್ಬರು ಸದಸ್ಯರನ್ನು ಆರಿಸಲು ಚುನಾವಣೆ ನಡೆಯುತ್ತದೆ.

2. ಉಪಸಭಾದಲ್ಲಿ ತಮ್ಮ ಕಾರ್ಯಕಾರಿ ಸಮಿತಿಗೆ ಕನಿಷ್ಠ 9 ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ, ಗರಿಷ್ಠ 11 ಮಂದಿ ಸದಸ್ಯರನ್ನೂ ಆಯ್ಕೆ ಮಾಡಲಾಗುತ್ತದೆ. ಉಪಸಭಾದ ಕಾರ್ಯಕಾರಿ ಸಮಿತಿಯ ಸದಸ್ಯರ ಸಂಖ್ಯೆಯು ಉಪಸಭಾದ ಸದಸ್ಯರ ಸಂಖ್ಯೆಗೆ ಅನುಗುಣವಾಗಿರುತ್ತದೆ. ಆದರೆ ಯಾವುದೇ ಕಾರಣಕ್ಕೂ ಅದು ಹನ್ನೊಂದನ್ನು(11) (ಕೇಂದ್ರ ಸಮಿತಿ ಸದಸ್ಯರನ್ನು ಹೊರತುಪಡಿಸಿ) ಮೀರಬಾರದು, ಉಪಸಭಾದ ಕಾರ್ಯಕಾರಿ ಸಮಿತಿಯ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುವ ಜವಾಬ್ದಾರಿ ಕೇಂದ್ರ ಸಮಿತಿಯದಾಗಿದ್ದು ಅದು ಎಲ್ಲ ಉಪಸಭಾಗಳಿಗೂ ಕಡ್ಡಾಯವಾಗಿ ಅನ್ವಯವಾಗುತ್ತದೆ ಕನಿಷ್ಠ ಮತ್ತು ಗರಿಷ್ಠ ಸಂಖ್ಯೆಗಳಿಗೆ ಅನುಗುಣವಾಗಿ ಚುನಾವಣೆಗಳು ನಡೆಯುತ್ತವೆ.

3. ಕಾರ್ಯಕಾರಿ ಸಮಿತಿಯ ಸದಸ್ಯರ ಚುನಾವಣೆಯ ನಂತರ, ಸಮಿತಿಯ ಮೊಟ್ಟ ಮೊದಲ ಸಭೆಯಲ್ಲಿ ಈ ಕೆಳಗೆ ಹೇಳಿರುವ ಪದಾಧಿಕಾರಿಗಳನ್ನು ಗುಪ್ತ ಮತದಾನ ಅಥವಾ ಒಮ್ಮತದಿಂದ ಆರಿಸಲಾಗುತ್ತದೆ.

ಅ) ಗೌ॥ ಅಧ್ಯಕ್ಷರು

ಆ) ಗೌ॥ ಉಪಾಧ್ಯಕ್ಷರು (ಉಪಸಭಾಗಳ ವಿವೇಚನೆಗೆ ತಕ್ಕಂತೆ)

ಇ) ಗೌ॥ ಕಾರ್ಯದರ್ಶಿ

ಈ) ಗೌ॥ ಖಜಾಂಚಿ

4. ಕೇಂದ್ರ ಸಭಾ ಅಥವ ಉಪಸಭಾದ ಚುನಾವಣೆಗಳಿಗೆ ವೇಳಾ ಪಟ್ಟಿಯನ್ನು ಕೇಂದ್ರ ಸಭಾದ ಕಾರ್ಯದರ್ಶಿರವರು ಸಿದ್ದಪಡಿಸುವರು ಮತ್ತು ಸಂಬಂಧಿಸಿದ ಉಪಸಭಾಗಳಿಗೆ ವೇಳಾಪಟ್ಟಿಯ ಸೂಚನೆಯನ್ನು ನೀಡಲಾಗುವುದು. ಕೇಂದ್ರ ಸಭಾವು ಮುಖ್ಯ ಚುನಾವಣಾಧಿಕಾರಿಯಿಂದ ವೇಳಾಪಟ್ಟಿಯನ್ನು ಪಡೆದ ನಂತರ ಪ್ರಧಾನ ಸಭಾ ಉಪಸಭಾ ಸೇರಿದಂತೆ ತನ್ನ ಎಲ್ಲಾ ಗುರುತಿನ ಚೀಟಿಯನ್ನು ಪಡೆದಿರುವ ಸದಸ್ಯರುಗಳಿಗೆ ಚುನಾವಣಾ ಸೂಚನಾ ಪತ್ರಗಳನ್ನು ಕನಿಷ್ಟ 14

ದಿನಗಳಿಗೆ ಮುಂಚಿತವಾಗಿ ತಲುಪಿಸಲು ವ್ಯವಸ್ಥೆ ಮಾಡುವುದು.

ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಕೇಂದ್ರ ಸಭಾದಿಂದ ಕಳುಹಿಸಿದ ಪರಿಷ್ಕರಿಸಿದ ಸದಸ್ಯರ ಪಟ್ಟಿಯನ್ನು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು.

5. ಚುನಾವಣಾ ಪ್ರಕ್ರಿಯೆ ಮತ್ತು ವಿಶೇಷ / ಸರ್ವಸದಸ್ಯರ ಸಭೆಯ ದಿನಾಂಕ ಘೋಷಣೆಯಾದ ನಂತರ ಒಂದು ಉಪಸಭಾದಿಂದ ಇನ್ನೊಂದು ಉಪಸಭಾಗೆ ವರ್ಗಾವಣೆ–ಯನ್ನು ಯಾವುದೇ ಸಂದರ್ಭಗಳಲ್ಲಿಯೂ ಸಹ ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೂ ಕೈಗೊಳ್ಳಲಾಗುವುದಿಲ್ಲ ಮತ್ತು ಹೊಸ ಸದಸ್ಯತ್ವದ ಅರ್ಜಿಗಳನ್ನು ಚುನಾವಣಾ ಪ್ರಕ್ರಿಯೆ / ಸರ್ವ ಸದಸ್ಯರ ಸಭೆಯು ಸಂಪೂರ್ಣಗೊಳ್ಳುವವರೆಗೆ ಗಮನಿಸುವುದಿಲ್ಲ.

40. ಕೇಂದ್ರ ಸಭಾ ವಿದ್ಯಾಭ್ಯಾಸದ ದತ್ತಿ, ಪಾಲಿಟೆಕ್ನಿಕ್, ಎಲ್ಲಾ ಉಪಸಭಾಗಳು ಮತ್ತು ಸಭಾದ ಉಸ್ತುವಾರಿಗೆ ಒಳಪಟ್ಟಂತಹ ಎಲ್ಲಾ ಸಿಬ್ಬಂದಿಗಳಿಗೆ ಅನ್ವಯಿಸುವಂತೆ ವಿವರವಾದ ಸೇವಾ ನಿಯಮಗಳನ್ನು ರಚಿಸಲಾಗುವುದು. ಇವುಗಳಲ್ಲಿ ಅವರ ನೇಮಕಾತಿ, ವರ್ಗಾವಣೆ ಮತ್ತು ಸೇವಾ ಮುಕ್ತಿ ಇವುಗಳನ್ನೊಳಗೊಂಡಂತೆ ಸೇವಾ ನಿಯಮಗಳು ಒಳಗೊಂಡಿರುತ್ತವೆ. ಈ ನಿಯಮಗಳು ಈಗಿರುವ ಮತ್ತು ಮುಂದೆ ನೇಮಕಗೊಳ್ಳಲಿರುವ ಎಲ್ಲಾ ಸಿಬ್ಬಂದಿಗಳಿಗೆ ಅನ್ವಯಿಸುತ್ತದೆ. ಸಿಬ್ಬಂದಿವರ್ಗದವರು ಯಾವುದೇ ಚುನಾವಣೆಗೆ ಸ್ಪರ್ಧಿಸಬೇಕಾದರೆ 6 ತಿಂಗಳ ಮೊದಲು ಕೆಲಸಕ್ಕೆ ರಾಜೀನಾಮೆ ನೀಡಿ ನಂತರ ಸ್ಪರ್ಧಿಸಬಹುದು.

## ಆಡಳಿತ ಮಂಡಳಿ ಪದಾಧಿಕಾರಿಗಳು

**ಶ್ರೀ ಈ.ಎಸ್. ಮುರಳೀಧರ್**
ಗೌ॥ ಅಧ್ಯಕ್ಷರು

**ಶ್ರೀ ಎಸ್.ಜಿ. ಬಾಲಕೃಷ್ಣ**
ಗೌ॥ ಉಪಾಧ್ಯಕ್ಷರು

**ಶ್ರೀ ಕೆ.ಆರ್. ಜಯರಾಮ್**
ಗೌ॥ ಉಪಾಧ್ಯಕ್ಷರು

**ಶ್ರೀ ಅಭಿಷೇಕ್ ಎಸ್. ಐಯ್ಯಂಗಾರ್**
ಗೌ॥ ಕಾರ್ಯದರ್ಶಿ

**ಶ್ರೀ ಕೆ.ಜಿ. ಶ್ರೀಧರ್**
ಗೌ॥ ಜಂಟಿ ಕಾರ್ಯದರ್ಶಿ

**ಶ್ರೀಮತಿ ಶೋಭ ಕೆ. ಕುಮಾರ್**
ಗೌ॥ ಮಹಿಳಾ ಜಂಟಿ ಕಾರ್ಯದರ್ಶಿ

**ಶ್ರೀ ಬಿ.ಎಸ್. ನರಸಿಂಹನ್**
ಗೌ॥ ಖಜಾಂಚಿ

**ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳಿಂದ ದಿನಾಂಕ 22.12.2023ರಂದು ನೋಂದಾಯಿಸಿ ಅನುಮೋದನೆ ಪಡೆದಿದೆ ಮತ್ತು ಅಂದಿನಿಂದಲೇ ಜಾರಿಗೆ ಬಂದಿರುತ್ತದೆ.**

## ಕೇಂದ್ರ ಸಮಿತಿ ಸದಸ್ಯರುಗಳು

| | |
|---|---|
| ಶ್ರೀ ಕೇಶವ ಪ್ರಸಾದ್ ಎಂ.ಆರ್ | ಶ್ರೀ ಶ್ರೀಹರಿ ಎ.ಆರ್ |
| ಶ್ರೀ ಎಸ್.ಎಲ್.ಎನ್. ಪ್ರಸಾದ್ | ಶ್ರೀಮತಿ ರಮಾ ಪ್ರಸಾದ್ |
| ಶ್ರೀ ಮಂಜುನಾಥ್ ಎಸ್.ಎನ್ | ಶ್ರೀ ಬಾಲಾಜಿ ಹೆಚ್.ಕೆ |
| ಶ್ರೀ ಹರೀಶ ಎನ್.ಕೆ | ಶ್ರೀ ಬದ್ರಿ .ಕೆ |
| ಶ್ರೀ ಚಂಪಕ ವಾಸನ್ | ಶ್ರೀ ಶ್ರೀನಿವಾಸ ರಾಘವನ್ |
| ಶ್ರೀ ಅಜಿತ್ ಕುಮಾರ್ ಜಿ.ಎಸ್ | ಶ್ರೀ ಸುಪರ್ಣ ಹೆಚ್.ಎನ್ |
| ಶ್ರೀ ರಾಮಪ್ರಸಾದ್ ಹೆಚ್.ಎನ್ | ಶ್ರೀ ಪ್ರಸಾದ್ .ಬಿ |
| ಶ್ರೀ ಅನೂಪ್ ಕುಮಾರ್ ಬಿ.ಎಸ್ | ಶ್ರೀ ತಿರುಮಲಾಚಾರ್ |
| ಶ್ರೀ ರಾಮಪ್ರಸಾದ್ ಎನ್.ಆರ್ | ಶ್ರೀ ಸಂಪತ್ ಕುಮಾರನ್ .ಕೆ |
| ಶ್ರೀ ನಂದನ್ ಜಿ ಗೊರೂರು | ಶ್ರೀ ಶ್ರೀನಿವಾಸ ಬಿ.ವಿ. |
| ಶ್ರೀ ಅನಂತರಾಮ್ ಡಿ.ಎಸ್ | |



ಸುದರ್ಶನ ಕಲ್ಯಾಣ ಮಂಟಪ, ಬೆಂಗಳೂರು


ಸುದರ್ಶ ಭವನ 1, ಬೆಂಗಳೂರು


ಸುದರ್ಶ ಭವನ 1, ಬೆಂಗಳೂರು


ಶ್ರೀಮಠ್ ಭವನ1, ಮೈಸೂರು


ಶ್ರೀಮಠ್ ಭವನ2, ಮೈಸೂರು


2.5 ಎಕರೆ ನಿವೇಶನ, ಮೈಸೂರು


ಶ್ರೀ ರಾಮಾನುಜ ಭವನ, ಹಾಸನ


ಶ್ರೀ ರಾಮಾನುಜ ವೈದಿಕ ಭವನ, ಹಾಸನ


ನಿವೇಶನ, ಹಾಸನ


ನಿವೇಶನ, ಶಿವಮೊಗ್ಗ


ವೈಯಾಲಿಕಾವಲ್ ಮನೆ, ಬೆಂಗಳೂರು

Printed Matter

Book Post

To,

Smt./Sri ______________________

______________________

______________________

______________________

If undelivered please return to

**The Hebbar Sreevaishnava Sabha (R)**
22, Seshadri Road, BANGALORE - 560009
Phone No. 080 - 48528222 / 8217544776